ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY DEBATES

ಸೋಮವಾರ 10ನೇ ಏಪ್ರಿಲ್ 95 ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

ಅಧ್ಯಕ್ಷರು : ಕಾರ್ಯಕ್ರಮವನ್ನು ಶುರು ಮಾಡೋಣ. ದಯಮಾಡಿ ಸಹಕರಿಸಿ. ಮುಖ್ಯಮಂತ್ರಿಯವರ ಉತ್ತರ ಇದೆ.

(ಅವರ ಉತ್ತರಕ್ಕೆ ಯಾವುದೇ ವಿಧವಾದಂಥ ಅಡ್ಡಿ ಆತಂಕಗಳನ್ನು ಮಾಡುವುದಿಲ್ಲ. ಇದು ಸ್ಪಷ್ಟ. ಎಂದು ಶ್ರೀ ವಾಟಾಳ್ ನಾಗರಾಜ್‌ರವರು ಧರಣಿ ನಿಂತಿದ್ದ ಜಾಗದಿಂದ ಹೇಳಿದರು).

ಅಧ್ಯಕ್ಷರು : ದಯಮಾಡಿ ತಮ್ಮ ಸ್ಥಾನಗಳಿಗೆ ಹಿಂದಿರುಗಿ. ಇಲ್ಲಿ ಹೇಳಿದರೆ ರೆಕಾರ್ಡ್ ಮಾಡಿಕೊಳ್ಳುವುದಕ್ಕೆ ನಮ್ಮ ನಿಯಮಗಳು ಅವಕಾಶ ಕೊಡುವುದಿಲ್ಲ. ದಯಮಾಡಿ ತಾವೆಲ್ಲರೂ ತಮ್ಮ ಸ್ಥಾನಗಳಿಗೆ ಹೋಗಿ. ಏನಾದರೂ ಹೇಳುವುದಿದ್ದರೆ ಅಲ್ಲಿಂದ ಹೇಳಿದರೆ ಕನಿಷ್ಠ ಕಡತಕ್ಕಾದರೂ ಹೋಗುತ್ತದೆ.

(ಧರಣಿ ನಡೆಸುತ್ತಿದ್ದ ಎಲ್ಲ ಸದಸ್ಯರೂ ತಮ್ಮ ತಮ್ಮ ಸ್ಥಾನಗಳಿಗೆ ಹಿಂದಿರುಗಿದರು)

ಶ್ರೀ ಬಿ.ಎಸ್.ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಗಳು ಇವತ್ತು ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲೆ ಉತ್ತರವನ್ನು ಕೊಡಬೇಕಾಗಿದೆ. ಅದರ ಬಗ್ಗೆ ನಮ್ಮದೇನೂ ಆಕ್ಷೇಪಣೆ ಇಲ್ಲ. ಅದಕ್ಕೆ ನಾವು ಭಾಗವಹಿಸಬೇಕು ಎಂದು ಇದ್ದೇವೆ. ನಮ್ಮ ಪೂರ್ಣ ಸಹಕಾರ ಕೊಡಬೇಕು ಎಂದೂ ಇದ್ದೇವೆ. ಇದು ಒಂದು ಸತ್ಸಂಪ್ರದಾಯ ಬೆಳೆದುಕೊಂಡು ಬಂದಿರುವಂಥಾದ್ದು. ರಾಜ್ಯಪಾಲರ ಭಾಷಣವನ್ನು ಧಿಕ್ಕರಿಸಿ ಹೊರ ಹೋಗುವುದಾಗಲೀ, ಉತ್ತರ ಕೊಡುವಂಥ ಸಂದರ್ಭದಲ್ಲಿ ಸಭಾತ್ಯಾಗ ಮಾಡುವುದಾಗಲೀ ಇದಕ್ಕೆ ನಮ್ಮ ಒಪ್ಪಿಗೆಯೂ ಇಲ್ಲ ಮತ್ತು ಅಂಥ ಒಂದು ಬೆಳವಣಿಗೆಯನ್ನು ಮಾಡುವುದಕ್ಕೆ ನಾವು ಸಿದ್ಧವಾಗಿಯೂ ಇಲ್ಲ. ಆದರೆ ಒಂದೇ ಒಂದು ಸಂಗತಿ ಎಂದರೆ, ಯಾವ ಒಂದು ಶಾಸಕರ

ಕೆಲವು ಹಕ್ಕುಭಾದ್ಯತೆಗಳನ್ನು ನಾವು ಪ್ರಶ್ನೆ ಮಾಡಿದ್ದೇವೆ, ಅದು ಸ್ವಂತದ್ದು ಏನಲ್ಲ. ನಮಗೇನೂ ಕೆಲವು ಸವಲತ್ತುಗಳು ಬೇಕು ಎಂದು ನಾವು ಕೇಳುತ್ತಿಲ್ಲ. ಚುನಾಯಿತ ಪ್ರತಿನಿಧಿಗಳಾಗಿ ಜನ ಸೇವೆ ಮಾಡುವುದಕ್ಕೆ ಬಹಳ ಕಾಲದಿಂದ ಯಾವ ಕೆಲವು ಸತ್ಸಂಪ್ರದಾಯಗಳು ಬೆಳೆದುಕೊಂಡು ಬಂದಿವೆ, ಹಿಂದಿನ ಸರ್ಕಾರ ಮಾಡಿಕೊಂಡು ಬಂದಿತ್ತು. ಅದನ್ನು ಮುಂದುವರೆಸಬೇಕು ಎನ್ನುವುದು ಒಂದೇ ಒಂದು ಒತ್ತಾಯ ನಮ್ಮದು. ಇದರ ಬಗ್ಗೆ ದೀರ್ಘವಾದ ಚರ್ಚೆ ಒಂದು ದಿವಸ ಆಯಿತು. ತಮ್ಮ ಕೊಠಡಿಯಲ್ಲಿ ಕುಳಿತುಕೊಂಡು ನಾವು ಮಾತನಾಡಿದೆವು, ಸಭಾನಾಯಕರು ಕೆಲವು ಒಪ್ಪಿಗೆಗಳನ್ನು ಕೊಟ್ಟರು, ಇಲ್ಲಿ ಬಂದು ಪ್ರಕಟಿಸಿದರು. ಒಂದು ಸಾರಿ ಪ್ರಕಟಮಾಡಿದ ಮೇಲೆ ಜನ ಸೇವೆ ಮಾಡುವುದಕ್ಕೆ ಅಗತ್ಯವಿರುವಂಥ ಕೆಲವು ಸವಲತ್ತುಗಳನ್ನು ಮಾಡಿಕೊಡುತ್ತೇವೆ ಎಂದು ಹೇಳಿದ ಮೇಲೆ, ಅದರ ಬಗ್ಗೆ ಒಂದು ಸರ್ಕಾರಿ ಆಜ್ಞೆ ಸುತ್ತೋಲೆ ಕಳುಹಿಸಿಕೊಡಬೇಕಂಥ ಅಗತ್ಯ ಇದೆ. ಅದರ ಬಗ್ಗೆ ನಾವು ಡಿಮ್ಯಾಂಡ್ ಮಾಡುವಂಥದ್ದು ನಮ್ಮ ಕರ್ತವ್ಯವೂ ಸಹ ಆಗಿದೆ. ಏಕೆಂದರೆ ನಾವು ನಾಳೆಯಿಂದ ಸದನವನ್ನು ಮುಗಿಸಿಕೊಂಡು ಪಾಪಸ್ ಹೋಗುವವರಿದ್ದೇವೆ. ಏನು ಘೋಷಣೆ ಮಾಡಿದ್ದಾರೆ, ಅದು ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ಬಂತು ಅಥವಾ ಇಲ್ಲ ಎನ್ನುವುದು ಒಂದು, ಅವರು ಅಪಹಾಸ್ಯಕ್ಕೆ ಈಡಾಗಬಾರದು ಎನ್ನುವ ದೃಷ್ಟಿಯಿಂದ ಈ ಒಂದು ಒತ್ತಾಯವನ್ನು ಮಾಡಿದ್ದೇವೆ. ಏನಾದರೂ ಸ್ವಂತ ಸವಲತ್ತುಗಳನ್ನು ಬೇಕು ಎಂದು ನಾವು ಕೇಳುತ್ತಿಲ್ಲ. ಏಕೆಂದರೆ ಜನತೆಗೆ ಈ ಅಭಿಪ್ರಾಯ ಬರಬಾರದು. ಆದ್ದರಿಂದ ನಾನು ಸ್ಪಷ್ಟಪಡಿಸುತ್ತಿದ್ದೇನೆ. ಶಾಸಕರಾಗಿ ಒಂದು ಸ್ಥಳದಲ್ಲಿ ಕುಳಿತು ಜನರ ಸಮಸ್ಯೆಗಳನ್ನು ಅರಿತು ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಜನರ ಆಗುಹೋಗುಗಳಿಗೆ ಭಾಗಿಗಳಾಗಬೇಕು ಎನ್ನುವಂಥ ಕಳಕಳಿ ಇರುವುದರಿಂದ ಅದರ ಬಗ್ಗೆ ನಾವು ಈ ಒಂದು ಒತ್ತಾಯವನ್ನು ಮಾಡುತ್ತಿದ್ದೇವೆ ಅದಕ್ಕೋಸ್ಕರವಾಗಿ ಹಿಂದೆ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದರು. ನಾವು ಈಗಂತೂ ಏನು ಕೇಳುವುದಕ್ಕೂ ಸಿದ್ಧವಿಲ್ಲ. ಇದು ಬೇಕು, ಇದು ಬೇಡ ಎಂದು ನಾವು ಯಾವುದನ್ನೂ ಕೇಳುವುದಕ್ಕೆ ಸಿದ್ದವಿಲ್ಲ. ಆವತ್ತು ಕೊಠಡಿಯಲ್ಲಿ ಕುಳಿತು ಮಾತನಾಡಿದಂತೆ, ಜನಸೇವೆ ಮಾಡುವುದಕ್ಕೆ ಏನೇನು ಸಲವಲತ್ತುಗಳು ಅಗತ್ಯ ಇದೆಯೋ ಅದನ್ನು ಕೊಡುವುದು ಬಿಡುವುದು ಸಭಾನಾಯಕರಿಗೆ ಬಿಟ್ಟಿದ್ದುದು. ಆದರೆ ಈ ರಾಜ್ಯದ ಜನರಿಗೆ ಅನೇಕ ವರ್ಷಗಳಿಂದ ಏನು ಸವಲತ್ತುಗಳಿತ್ತು ಅದನ್ನು ಕಸಿದುಕೊಂಡು, ಈ ರೀತಿಯ ನಡವಳಿಕೆ ಇವತ್ತು ನಡೆಯುತ್ತಿದೆ, ಇದು ಯಾರಿಗೂ ಸಹ ಗೌರವ ತರುವಂಥ ಸಂಗತಿ ಅಲ್ಲ. ಮತ್ತು ಇನ್ನೊಂದನ್ನು ಸಭಾನಾಯಕರಿಗೆ ಸ್ಪಷ್ಟ ಮಾಡಲು ಇಚ್ಛಿಪಡುತ್ತೇನೆ. ವಿರೋಧ ಪಕ್ಷದ ನಾಯಕರ ಸಂಖ್ಯೆ ಜಾಸ್ತಿ ಇರುವುದರಿಂದ ಆ ಸವಲತ್ತುಗಳನ್ನು ಕೊಡುವುದರಿಂದ ವಿರೋಧ ಪಕ್ಷಗಳು ಬೆಳೆಯುತ್ತವೆ ಅದನ್ನು ಅಡ್ಡಿ ಮಾಡಬೇಕು, ಅತಂಕ ಮಾಡಬೇಕು ಎನ್ನುವ ಭಾವನೆ ನಿಮ್ಮ ಸರ್ಕಾರಕ್ಕೆ ಇದೆ ಎನ್ನುವುದೂ ಸಹಾ ಸರ್ಕಾರಕ್ಕೆ ಗೌರವ ತರುವಂಥ ಸಂಗತಿ ಅಲ್ಲ. ಅದಕ್ಕೋಸ್ಕರ ನಾನು ಈ ಸಂದರ್ಭದಲ್ಲಿ ಯಾವುದೇ ಒಂದು ಮಾತನ್ನು ಹೇಳದೇ, ಏಕೆಂದರೆ ಜನಗಳಿಗೆ ಸಹ ಪತ್ರಿಕೆಗಳ ಮೂಲಕ ತಿಳಿದು, ಏನೋ ಇವರು ಸ್ವಂತ ಸವಲತ್ತುಗಳಿಗೆ ಬಡಿದಾಟ ಮಾಡುತ್ತಾರೆ ಎನ್ನುವಂಥ ಭಾವನೆ ಬರುವಂಥಾದ್ದು ಸರಿಯಲ್ಲ, ಅದಕ್ಕೋಸ್ಕರ ಸಭಾನಾಯಕರು ಏನನ್ನು ಒಪ್ಪಿಕೊಂಡಿದ್ದರು,

ಏನು ಮಾತುಕತೆ ಆಗಿತ್ತು, ಅದರಂತೆ ಏನು ಮಾಡಬೇಕು, ಬಿಡಬೇಕು ಎನ್ನುವುದು ಅವರಿಗೆ ಬಿಟ್ಟಿದ್ದುದು. ಅಥವಾ ಏನೂ ಇಲ್ಲ ಎಂದರೂ ನಾವು ಚುನಾಯಿತ ಶಾಸಕರಾಗಿ ಹೇಗೆ ಕೆಲಸ ಮಾಡುವುದು ಎನ್ನುವುದು ನಮಗೆ ಗೊತ್ತಿದೆ. ವಿರೋಧ ಪಕ್ಷವಾಗಿ, ಪ್ರಬಲವಾಗಿ ಜನರ ಸಮಸ್ಯೆ ತೆಗೆದುಕೊಂಡು ಸದನದ ಒಳಗೆ ಮತ್ತು ಹೊರಗೆ ಯಾವ ರೀತಿ ಹೋರಾಟ ಮಾಡುತ್ತೇವೆ ಅದನ್ನು ತಿಳಿಸುವುದಕ್ಕೆ ನಮಗೆ ಶಕ್ತಿಯೂ ಇದೆ ಮತ್ತು ಇರುವಂಥ ಸವಲತ್ತುಗಳನ್ನು ಕಿತ್ತುಕೊಂಡಮೇಲೂ ಸಹ ಇವತ್ತು ಯಾವ ಕಾರಣಕ್ಕೋಸ್ಕರದಿಂದ ಸವಲತ್ತುಗಳನ್ನು ಕಿತ್ತುಕೊಂಡಿದ್ದಾರೆ ಎನ್ನುವುದನ್ನು ಜನರಿಗೆ ತಿಳಿಸಿ, ಯಶಸ್ವಿಯಾಗಿ ನಾವು ಆ ಕೆಲಸ ಮಾಡುವುದಕ್ಕೆ ನಮಗೆ ಶಕ್ತಿ ಇದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಶಾಸಕರ ಜೊತೆಗೆ ಹೇಗೆ ನಡೆದುಕೊಳ್ಳಬೇಕು ಎನ್ನುವ ಸರ್ಕಾರದ ನೀತಿ ಇವತ್ತು ಏನಿದೆ, ಅದನ್ನು ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡಿ ನಾವೆಲ್ಲರೂ ಹೋಗುತ್ತಿದ್ದೇನೆ. ನಂತರ ಮತ್ತೆ ವಾಪಸ್ಸು ಬಂದು ರಾಜ್ಯಪಾಲರ ಭಾಷಣಕ್ಕೆ ಸಭಾನಾಯಕರು ಏನು ಉತ್ತರ ಕೊಡುತ್ತಾರೆ ಅದನ್ನು ಕೇಳುವುದಕ್ಕೆ ನಾವು ಸಿದ್ಧರಿದ್ದೇವೆ, ಸನ್ಮಾನ್ಯ ಅಧ್ಯಕ್ಷರೇ.

* ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಿನ್ನೆ ನಾವೆಲ್ಲರೂ, ಇಲ್ಲಿರತಕ್ಕಂಥ ಎಲ್ಲಾ ವಿರೋಧ ಪಕ್ಷದವರೂ ಧರಣಿ ಮಾಡತಕ್ಕಂಥ ಉದ್ದೇಶ ಅವರ ಭಾಷಣವನ್ನು ಅಡ್ಡಿ ಪಡಿಸಬೇಕು, ನಿಲ್ಲಿಸಬೇಕು ಎನ್ನುವುದು ಅಲ್ಲ. ಅವರು ಭಾಷಣ ಮಾಡಲೇಬೇಕು ಎನ್ನುವುದು ನಮ್ಮೆಲ್ಲರ ಅತ್ಯಂತ ಕಳಕಳಿ. ಮತ್ತು ಮನವಿ ಅದರ ಬಗ್ಗೆ ಎರಡನೇ ಅಭಿಪ್ರಾಯವಿಲ್ಲ. ಮತ್ತು ಶಾಸಕರ ಬಗ್ಗೆ ಹಕ್ಕು ಏನು ಎಂದು ಹೇಳಿದರೆ ನಾವು ಏನೋ ಶಾಸಕರುಗಳು ಯಾವ್ಯಾವುದೋ ಸ್ವಂತ ಅನುಕೂಲಗಳು ಕೇಳುತ್ತಾರೆ ಎನ್ನುವ ಭಾವನೆ ಬೇರೆಯವರಿಗೆ ಅರ್ಥವಾಗುವುದು ಬೇಕಿಲ್ಲ. ನಾವು ಅದು ಯಾವುದನ್ನು ಕೇಳಿಲ್ಲ. ಹಿಂದಿನ ಸರ್ಕಾರಗಳು ಶ್ರೀಮಾನ್ ಬಂಗಾರಪ್ಪನವರ ಸರ್ಕಾರ, ಮೊಯಿಲಿಯವರ ಸರ್ಕಾರ ಹೀಗೆ ಶಾಸಕರುಗಳಿಗೆ ಯಾವಯಾವ ಹಕ್ಕುಗಳನ್ನು ಅವರ ಕ್ಷೇತ್ರದಲ್ಲಿ ನೀಡಿದ್ದರು ಜನರ ಹಿತದೃಷ್ಟಿಯಿಂದ ಆ ಹಕ್ಕುಗಳನ್ನು ಮೊಟಕು ಮಾಡಬೇಡಿ. ಜನರ ಕೆಲಸ ಮಾಡುವುದಕ್ಕೆ ಶ್ರೀಮಾನ್ ಬಂಗಾರಪ್ಪನವರ ಕಾಲದಲ್ಲಿ ಯಾವ ಹಕ್ಕುಗಳನ್ನು ಕೊಟ್ಟಿದ್ದರು, ಇದನ್ನು ನಾನು ಅವರು ಇಲ್ಲಿದ್ದಾರೆ, ನನ್ನ ಪಕ್ಷದಲ್ಲಿ ಇದ್ದಾರೆ ಎನ್ನತಕ್ಕಂಥ ದೃಷ್ಟಿಯಿಂದ ಹೇಳುತ್ತಿಲ್ಲ, ಬಹಳ ಪ್ರಾಮಾಣಿಕವಾಗಿ ನಾಲ್ಕು ಮಾತುಗಳನ್ನು ಹೇಳುವುದಾದರೆ ಶಾಸಕರುಗಳಿಗೆ ಅವರ ಕರ್ತವ್ಯವನ್ನು ಮಾಡಬೇಕು ಎಂದು ಹೇಳಿ ಅವರ ಕೈಯನ್ನು ಕಟ್ಟಿದೇ ಬಹಳ ವಿಶಾಲವಾದಂಥ ವ್ಯವಸ್ಥಿತ ದೃಷ್ಟಿಯಿಂದ ಸಹಾಯ ಮಾಡುವುದಕ್ಕೆ ಅನೇಕ ಸಮಿತಿಗಳನ್ನು ಅವರೇ ಉದ್ಭವಮಾಡಿ, ಆ ಸಮಿತಿಗೆ ಅಧ್ಯಕ್ಷರುಗಳನ್ನಾಗಿ ಮಾಡಿ, ಆ ಸಮಿತಿಗಳು ಒಳ್ಳೆಯ ಉತ್ತಮವಾದಂಥ ಕೆಲಸಗಳನ್ನು ಮಾಡಿವೆ, ಕೆಲವು ಕಡೆ ಮಾಡದೇ ಇರಬಹುದು. ಅದನ್ನು ಎಲ್ಲರೂ ಮಾಡಿದ್ದಾರೆ ಎಂದು ಹೇಳುತ್ತಿಲ್ಲ, ಕೆಲವರು ಮಾಡದೇ ಇರಬಹುದು. ಅದನ್ನು ನೋಡುವುದಕ್ಕೆ ಎಚ್ಚರ ವಹಿಸುವುದಕ್ಕೆ ಸರ್ಕಾರಕ್ಕೆ ಅನೇಕ ವಿಧಿ ವಿಧಾನಗಳಿವೆ. ಅಂಥಾದ್ದರಲ್ಲಿ ಈಗ ಬಂದಂಥ ಸರ್ಕಾರ ನೇರವಾಗಿ ಆ ಎಲ್ಲಾ ಹಕ್ಕುಗಳನ್ನು ಬದಿಗೊತ್ತಿ ಶಾಸಕರು ಯಾವ ಕೆಲಸವನ್ನೂ ಮಾಡುವುದಕ್ಕೆ ಅವಕಾಶ ಇಲ್ಲದಿರುವಂಥ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಈ ಬಗ್ಗೆ ನಾವು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿದ್ದು,

ನಾವೇನೂ ಅವರ ಮೇಲೆ ಈ ಸದನದಲ್ಲಿ ಯುದ್ಧ ಮಾಡಬೇಕು ಅಥವಾ ದಾಂಧಲೆ ಮಾಡಬೇಕು ಎನ್ನತಕ್ಕಂಥ ಉದ್ದೇಶದಿಂದ ಅಲ್ಲ. ನಮ್ಮ ಧಾಟಿಯಲ್ಲಿ ಅವರಿಗೆ ಜೋರಾಗಿ ಇರಬಹುದು ಆದರೆ ವಸ್ತು ಸ್ಥಿತಿ ಮಾತ್ರ ಬಹಳ ಪ್ರಾಮಾಣಿಕವಾದಂಥ ವಸ್ತು ಸ್ಥಿತಿ. ಇದೇನು ಯಾವುದೇ ಒಂದು ಪಕ್ಷದ ಸದಸ್ಯರಿಗೆ ಇರತಕ್ಕಂಥಾದ್ದು ಅಲ್ಲ. ತಮ್ಮ ಜೊತೆಯಲ್ಲಿ ಅನೇಕ ಬಾರಿ ಮನವಿ ಮಾಡಿದ್ದೇವೆ ಮತ್ತು ತಮ್ಮ ಕೊಠಡಿಯಲ್ಲಿ ಅನೇಕ ಬಾರಿ ಚರ್ಚೆ ಮಾಡಿದ್ದೇವೆ. ಮುಖ್ಯ ಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದೇವೆ. ಅವರಿಗೂ ಇದು ಮನವರಿಕೆ ಆಗಬೇಕು. ಈಗ ನಾವು ಏನು ತಿಳಿದುಕೊಂಡಿದ್ದೇವೆ ಅಂದರೆ ಅದನ್ನು ಕೊಡುವುದು ಬಿಡುವುದು ಅವರಿಗೆ ಬಿಟ್ಟುಬಿಟ್ಟಿದ್ದೇವೆ, ಅವರಿಚ್ಛೆ, ಮಾಡುವುದು, ಬಿಡುವುದು ಅವರಿಗೆ ಸೇರಿದ್ದು. ಈಗ ನಾವು ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಈಗ ನಾವೆಲ್ಲಾ ಹೇಳಿದ್ದೇವೆ. ಇಷ್ಟೆಲ್ಲಾ ಹೇಳಿ ಮನವಿ ಮಾಡಿದ್ದೇವೆ. ಇಷ್ಟು ಮನವಿ ಮಾಡಿದ ಮೇಲೂ ಶಾಸನ ಸಭೆಯನ್ನು ಧಿಕ್ಕರಿಸಿ, ವಿರೋಧ ಪಕ್ಷಗಳನ್ನು ಧಿಕ್ಕರಿಸಿ ಅಂತರಿಕವಾಗಿ ಆತ್ಮಸಾಕ್ಷಿ ಎಂದು ಒಂದು ಇದೆಯಲ್ಲ, ಆ ಆತ್ಮಸಾಕ್ಷಿ ಮತ ತೆಗೆದುಕೊಂಡರೆ ಶಾಸಕರ ಹಕ್ಕುಗಳು ಹಿಂದೆ ಬಂಗಾರಪ್ಪನವರ ಕಾಲದಲ್ಲಿ, ಮೊಯಿಲಿಯವರ ಕಾಲದಲ್ಲಿ ಏನಿತ್ತು ಆ ಹಕ್ಕುಗಳು ಉಳಿದುಕೊಳ್ಳಬೇಕು ಎಂದು ಆತ್ಮಸಾಕ್ಷಿಯ ಮತವನ್ನು ನೀವು ಕೇಳುವುದಾದರೆ ಸ್ವಲ್ಪ ಹೆಚ್ಚು ಕಡಿಮೆ 224 ರಲ್ಲಿ 220 ಮತ ಬರುತ್ತದೆ. ಅದರಲ್ಲಿ ಏನೂ ಅನುಮಾನವಿಲ್ಲ. ಇಲ್ಲದೇ ನಮ್ಮ ಪಕ್ಷದ್ದೇ ಮತ, ನೋಡೇಬಿಡೋಣ ಎಂದರೆ ಸ್ವಲ್ಪ ವಿಭಜನೆ ಆಗಬಹುದು. ಆತ್ಮಸಾಕ್ಷಿ ಮತದಲ್ಲಿ ಇಡೀ ಸದನ ಒಂದು ಕಡೆ ಇದೆ. ಆದ್ದರಿಂದ ತಮ್ಮಲ್ಲಿ ನಾವು ಕಳಕಳಿಯ ಮನವಿ ಮಾಡುತ್ತಿದ್ದೇವೆ, ನಾವು ಧರಣಿ ಮಾಡಬೇಕು ಎನ್ನುವ ಉದ್ದೇಶ ಇದ್ದಿದ್ದನ್ನು ಕೈ ಬಿಟ್ಟಿದ್ದೇವೆ ಮತ್ತು ಈಗ ನಾವೆಲ್ಲರೂ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಈ ಒಂದು ಸರ್ಕಾರದ ಧೋರಣೆ, ಕಟುವಾದ ಧೋರಣೆ ಮತ್ತು ಶಾಸಕರ ಹಕ್ಕುಗಳನ್ನು ಹತ್ತಿಕ್ಕಿ ಈ ಶಾಸಕರು ಕೆಲಸಕ್ಕೆ ಬಾರದವರು ಶಾಸಕರ ಬಗ್ಗೆ ನಮಗೆ ಗೌರವ ಇಲ್ಲ, ಈ ಶಾಸನ ಸಭೆಗೆ ಬಂದಿರತಕ್ಕಂಥಾದ್ದು ಸರಿಯಿಲ್ಲವೇನೋ ಎನ್ನತಕ್ಕಂಥ ಧಾಟಿಯಲ್ಲಿ ಸರ್ಕಾರ ಏನು ನಡೆದುಕೊಳ್ಳುತ್ತಿದೆ ಆ ವರ್ತನೆ ಸರಿಯಿಲ್ಲ ಎಂದು ಅತ್ಯಂತ ಕಳಕಳಿಯಿಂದ ಮನವಿ ಮಾಡಿ ಮತ್ತೊಮ್ಮೆ ಮಾನ್ಯ ಮುಖ್ಯಮಂತ್ರಿಗಳನ್ನು ತಮ್ಮ ಮೂಲಕ ಮನವಿ ಮಾಡುತ್ತಿದ್ದೇವೆ. ಈಗ ಅವರ ಮನಸ್ಸಿನಲ್ಲಿ ಇರತಕ್ಕಂಥಾದ್ದನ್ನು ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ಮಾಡಿಕೊಳ್ಳದೇ ಅಥವಾ ಯಾವುದೇ ಮಂತ್ರಿಗಗಳೂ ಸಹಾ ಇದನ್ನು ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ಮಾಡಿಬಿಟ್ಟು ಮುಖ್ಯ ಮಂತ್ರಿಳಿಗೆ ಸ್ವಾಮಿ ಏನಾದರೂ ಚಿಂತೆಯಿಲ್ಲ, ನೋಡೇ ಬಿಡೋಣ, ನೀವು ಮಾತ್ರ ಇದಕ್ಕೆ ಒಪ್ಪಬೇಡಿ ಎಂದು ಹೇಳುವುದು ಸರಿಯಲ್ಲ. ಈ ಮಾತನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಶಾಸನ ಸಭೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳೇ ಬಹಳ ಸಂತೋಷದಿಂದ ಒಂದು ಹೇಳಿಕೆಯನ್ನು ಕೊಟ್ಟರು. ತಾಲ್ಲೂಕು ಆಫೀಸಿನಲ್ಲಿ ನಿಮಗೆ ಕಾರ್ಯಾಲಯವನ್ನು ಕೊಡುತ್ತೇವೆ, 20 ಅಂಶಗಳ ಕಾರ್ಯಕ್ರಮ ಜಾರಿ ಮಾಡುವುದು ಎಂದು ಇದೆಲ್ಲಾ ಬಹಳ ಸಂತೋಷದಿಂದ ಹೇಳಿದರು. ಅದಾದನಂತರ ಅವರು ಬದಲಾವಣೆ ಆಗಬೇಕಾದರೆ ಕೆಲವು ಒತ್ತಡಗಳಲ್ಲಿ ಎಂದು ನಾನು ಹೇಳುವುದಕ್ಕೆ ಸಾಧ್ಯವಿಲ್ಲ. ಯಾವುದೋ ಒತ್ತಡಕ್ಕೆ ಮಣಿದಿರಬಹುದು. ಅದೆಲ್ಲಾ ಅವರಿಗೆ

ಸೇರಿದ್ದುದು. ಅದರ ಬಗ್ಗೆ ನಾವು ವಾದ ಮಾಡುವುದಕ್ಕೆ ಹೋಗುವುದಿಲ್ಲ. ಆದರೂ ಮಾನ್ಯ ಅಧ್ಯಕ್ಷರೇ ನಾನು ತಮ್ಮ ಮೂಲಕ ಅವರಿಗೆ ಕಳಕಳಿಯ ಮನವಿ ಮಾಡುತ್ತಿದ್ದೇವೆ. ಪ್ರಾಮಾಣಿಕವಾಗಿ ಇದರ ಬಗ್ಗೆ ಎಲ್ಲಾ ಶಾಸಕರು ಪಕ್ಷಾತೀತವಾಗಿ ಮಾಡುತ್ತಿದ್ದೇನೆ. ದಳ ಇರಬಹುದು, ಬಿ.ಜೆ.ಪಿ. ಇರಬಹುದು, ಕೆ.ಸಿ.ಪಿ.ಇರಬಹುದು, ಕಾಂಗ್ರೆಸ್ ಇರಬಹುದು, ನಾನು ಇರಬಹುದು, ರೈತ ಸಂಘದವರು ಇರಬಹುದು ಯಾರೇ ಇರಬಹುದು, ಇಲ್ಲಿ ನಾವು ಪಕ್ಷಾತೀತವಾದ ಒಂದು ಮನವಿಯನ್ನು ಸರ್ಕಾರದ ಮುಂದೆ ಮಂಡಿಸಿದ್ದೇವೆ. ನಾಳೆ ಅವರು ಇದನ್ನು ಮಾಡಲೇ ಇಲ್ಲ ಎಂದು ಹೇಳಿದರೆ ಇದು ಅವರಿಗೆ ತಲೆ ನೋವಂತೂ ಇದ್ದದ್ದೇ. ಅದಕ್ಕೆ ಔಷಧವಂತೂ ಸಿಕ್ಕುವುದೇ ಇಲ್ಲ. ಅವರು ತಿಳಿದುಕೊಂಡಿರಬಹುದು. ಇದು ಎಲ್ಲಿಂದ ಶುರುವಾಗುತ್ತದೆ ತಲೆನೋವು ಎಂದರೆ ಅವರ ಮನೆಯಿಂದಲೇ ಶುರುವಾಗುತ್ತದೆ. ಆಮೇಲೆ ಬೀದಿಗೆ ಬರುವುದು. ಆದ್ದರಿಂದ ತಮಗೆ ಕಳಕಳಿಯಿಂದ ಮನವಿ ಮಾಡುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ಒಂದು ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ಮಾಡಿಕೊಳ್ಳದೇ, ಒಂದು ತೀರ್ಮಾನಕ್ಕೆ ಬರುವುದು ಮತ್ತು ತಾವು ಈ ಬಗ್ಗೆ ತೆಗೆದುಕೊಂಡ ಮತ್ತು ನಡೆಸಿದಂಥ ಮಾತುಕತೆಗಳಿಗೆ ತಮ್ಮನ್ನು ನಾವು ಅಭಿನಂದಿಸುತ್ತೇವೆ. ಇದರಲ್ಲಿ ಫಲ-ಪ್ರತಿಫಲಗಳ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ತಾವು ಬಹಳ ಪ್ರಾಮಾಣಿಕವಾಗಿ ಪ್ರಯತ್ನವನ್ನು ಮಾಡಿದ್ದೀರಿ. ಆದ್ದರಿಂದ ನಾನು ತಮ್ಮನ್ನು ಅಭಿನಂದಿಸುತ್ತೇನೆ ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಆರೋಗ್ಯ ಚೆನ್ನಾಗಿ ಇರಲಿ, ಆರೋಗ್ಯ ಭಾಗ್ಯ ಚೆನ್ನಾಗಿ ಕೊಡಲಿ ಮತ್ತು ಇವರು ಉತ್ತರ ಕೊಡುವುದಕ್ಕೆ ಬಂದಿದ್ದಾರೆ ಎಂದು ಬಹಳ ಸಂತೋಷವಾಗುತ್ತಿದೆ. ಇಷ್ಟು ಮಾತನ್ನು ಹೇಳಿ, ನಾವು ಎಲ್ಲಾ ಶಾಸಕರೂ ಒಟ್ಟಾಗಿ ಸಭಾತ್ಯಾಗ ಮಾಡತಕ್ಕಂಥ ಪ್ರಯತ್ನದಲ್ಲಿದ್ದೇವೆ. ಅದು ತಮಗೆ ಸೇರಿದ್ದು, ಏನೋ ಒಂದು ಕೊಸರು ಕೊಟ್ಟಹಾಗೆ ಅದೊಂದು ಕಮಿಟಿ ಮಾಡುತ್ತೇವೆ ಇರುತ್ತೀರಾ? ಇದೊಂದು ಕಮಿಟಿ ಮಾಡುತ್ತೇವೆ, ಇರುತ್ತೀರಾ? ಎಂದು ಕೇಳುವುದು ಬೇಡ. ನಮಗೆ ಕೊಸರೂ ಬೇಡ, ಏನೂ ಬೇಡ, ನಮಗೆ ಅವರು ಏನೂ ಕೊಡುವುದು ಬೇಡ. ಸಾರ್ವಜನಿಕರು ಏನು ತಿಳಿದುಕೊಂಡಿದ್ದಾರೆಂದರೆ, ಈ ಶಾಸಕರು ತಮ್ಮ ಹಕ್ಕುಗಳಿಗೆ ಬಹಳ ಹೋರಾಟ ಮಾಡುತ್ತಿದ್ದಾರೆ ಎಂದರೆ ನಾವು ರೂಮ್‌ಗೋಸ್ಕರ ಅಲ್ಲ, ಸಂಬಳ ಜಾಸ್ತಿ ಮಾಡಿ ಎಂದು ಕೇಳುತ್ತಿಲ್ಲ ಅಥವಾ ಭತ್ಯೆ ಜಾಸ್ತಿ ಮಾಡಿ ಎಂದು ಕೇಳುತ್ತಿಲ್ಲ. ನಮ್ಮ ಕ್ಷೇತ್ರದಲ್ಲಿ ನಾವು ಏನು ಕೆಲಸ ಮಾಡಬೇಕು? ನಮ್ಮ ಕ್ಷೇತ್ರದಲ್ಲಿ ನಾವು ಕೆಲಸ ಮಾಡಬೇಕಲ್ಲ. ನಮಗೆ ಮತ ಕೊಟ್ಟಂಥ ಮತದಾರರಿಗೆ ಏನು ಮಾಡಬೇಕು ಕೆಲಸ? ಮತದಾರರಿಗೆ ನಾವು ಕೆಲಸ ಮಾಡುವುದಕ್ಕಾಗುದಿಲ್ಲ ಎಂದು ಅಂದರೆ ನಮ್ಮ ಪರಿಸ್ಥಿತಿ ಏನು? ನಾವು ಶಾಸಕರು ಕತ್ತಲಲ್ಲಿ ಇರುತ್ತೇವೆ ಕತ್ತಲನಿಂದ ಬೆಳಕಿಗೆ ತರಬೇಕಾಗಿರುವುದು ಸರ್ಕಾರ ಮತ್ತು ಇದು ಸರ್ಕಾರದ ಕೃಪೆ ಏನಲ್ಲ ನಮಗೆ ನಾವು ಅವರ ಕೃಪೆಯನ್ನು ಕೇಳುತ್ತಿಲ್ಲ. ನಮ್ಮ ಹಕ್ಕು ಇದು, ಈ ಹಕ್ಕನ್ನು ಕಾಪಾಡತಕ್ಕಂಥಾದ್ದು ಅವರಿಗೆ ಮತ್ತು ತಮಗೆ ಸೇರಿರತಕ್ಕಂಥಾದ್ದು ಎನ್ನುವ ಮಾತನ್ನು ಹೇಳಿ ಮುಂದೆ ತಮಗೆ ಯಾವ ರೀತಿ ಧೋರಣೆ ಬರುತ್ತದೆ ತೆಗೆದುಕೊಳ್ಳಿ. ಮತ್ತು ಸರ್ಕಾರಕ್ಕೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳುತ್ತೇನೆ, ನಾವು ಒತ್ತಾಯ ಮಾಡಿದ್ದೇವಲ್ಲ, ಅದು ಯಾವುದನ್ನು ಅವರು ಕೊಡದಿದ್ದರೂ ಚಿಂತೆಯಿಲ್ಲ,

ನಮಗೆ ಯಾವ ಸಮಿತಿಯೂ ಬೇಕಾಗಿಲ್ಲ ಏನೂ ಬೇಕಾಗಿಲ್ಲ ಅನ್ನುವಂಥ ಮಾತನ್ನು ಬಹಳ ನೋವಿನಿಂದ ನಾನು ಈ ಸದನದ ಎಲ್ಲಾ ಸದಸ್ಯರ ಪರವಾಗಿ ತಮ್ಮ ಮುಂದೆ ನಿವೇದನೆ ಮಾಡುತ್ತಿದ್ದೇನೆ.

* ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ(ದುರುಮಿಠ್‌ಕಲ್) : ಮಾನ್ಯ ಅಧ್ಯಕ್ಷರೇ, ಕಳೆದ ಶನಿವಾರ ನಾವು ಧರಣಿಯನ್ನು ಪ್ರಾರಂಭ ಮಾಡಿದ್ದೇವೆ. ವಿಶೇಷವಾಗಿ ಶಾಸಕರ ಕರ್ತವ್ಯ ಏನು ಇರಬೇಕೆಂಬ ಬಗ್ಗೆ ನಾವು ಕೇಳಿಕೊಂಡಿದ್ದೇವೆ. ಶಾಸಕರು ಯಾವರೀತಿ ಜವಾಬ್ದಾರಿಯುತವಾಗಿ ಅವರವರ ಮತಕ್ಷೇತ್ರದಲ್ಲಿ ಕೆಲಸಕಾರ್ಯಗಳನ್ನು ನಿರ್ವಹಿಸಬೇಕು. ಅದಕ್ಕೆ ಕಾನೂನಿನಲ್ಲಿ ಮತ್ತು ಸರ್ಕಾರೀ ಆಜ್ಞೆಗಳಲ್ಲಿ ಇಲ್ಲಿಯವರೆಗೆ ಅವರಿಗೆ ಏನು ಮಾನ್ಯತೆಯನ್ನು ಕೊಟ್ಟಿತ್ತು ಅದನ್ನು ಮುಂದುವರಿಸಿಕೊಂಡು ಹೋಗಬೇಕೆಂಬುದೇ ನಮ್ಮೆಲ್ಲರ ವಾದ. ಈ ವಾದದಲ್ಲಿ ಬಹುಶಃ ಆ ಕಡೆಯ ಸದಸ್ಯರ ಮತ್ತು ಈ ಕಡೆಯ ಸದಸ್ಯರ ಅಭಿಪ್ರಾಯದಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಸರ್ಕಾರದಲ್ಲಿರತಕ್ಕ ಸಚಿವರು ಏನು ತಿಳಿದುಕೊಂಡಿದ್ದಾರೆಂದರೆ, ವಿರೋಧಪಕ್ಷದವರು ಹಠಮಾಡಿ ತಮಗೋಸ್ಕರವೇ ಕೆಲವು ಸವಲತ್ತುಗಳನ್ನು ಕೇಳುತ್ತಿದ್ದಾರೆ, ಅಥವಾ ವಿಶೇಷವಾದ ಹಕ್ಕನ್ನು ಪಡೆದುಕೊಳ್ಳುವ ಸಲುವಾಗಿ ಕೇಳುತ್ತಿದ್ದಾರೆಂದು ಭಾವನೆ ಬರತಕ್ಕ ರೀತಿಯಲ್ಲಿ ಮಾತನಾಡುತ್ತಿದ್ದಾರೆ ಮತ್ತು ಆ ದಿಸೆಯಲ್ಲಿ ಯೋಚನೆ ಮಾಡುತ್ತಿದ್ದಾರೆಂದರೆ ಬಹುಶಃ ತಪ್ಪಾಗಲಿಕ್ಕಿಲ್ಲ. ಆದರೆ ನಮ್ಮ ಕರ್ತವ್ಯ ಹೀಗಿತ್ತು, ನಮ್ಮ ಜನರಿಗೆ ಈ ರೀತಿ ಸಹಾಯ ಮಾಡುತ್ತಿದ್ದೆವು, ಅದು ಆರಾಧನಾ ಯೋಜನೆಯಲ್ಲಿ, ಹೌಸ್ ಸೈಟ್ಸ್ ಕಮಿಟಿಯಲ್ಲಿ, ಆಶ್ರಯಯೋಜನೆಯಲ್ಲಿ 20 ಅಂಶದ ಕಾರ್ಯಕ್ರಮದಲ್ಲಿ ಟಾಸ್ಕ್‌ಫೋರ್ಸ್ ಕಮಿಟಿಯಲ್ಲಿ ಅಕ್ರಮ ಸಾಗುವಳಿ ಜಮೀನನ್ನು ಸಕ್ರಮಗೊಳಿಸುವ ವಿಚಾರದಲ್ಲಿ, ಲ್ಯಾಂಡ್ ಗ್ರ್ಯಾಂಟ್ ಕಮಿಟೀಸ್, ಫಾರೆಸ್ಟ್ ಇಲಾಖೆಯಿಂದ ಬರತಕ್ಕ ಜಮೀನನ್ನು ರೆಗ್ಯುಲರೈಸ್ ಮಾಡುವುದು ಲ್ಯಾಂಡ್ ಟ್ರಿಬ್ಯುನಲ್ಸ್‌ನಲ್ಲಿ ಹೀಗೆ ಅನೇಕ ವಿಚಾರಗಳಲ್ಲಿ ನೀವು ನಮಗೆ ಕೊಟ್ಟಂಥ ಮಾನ್ಯತೆ ಏನಿತ್ತು ಅದನ್ನು ನಾನು ಹಕ್ಕು ಎಂದು ಹೇಳುವುದಿಲ್ಲ, ನಮ್ಮ ಕರ್ತವ್ಯಗಳು ಹೀಗಿದ್ದುವು. ನಾವು ಸಾಮಾನ್ಯ ಜನತೆಗೆ, ನಾಗರೀಕರಿಗೆ ಸಹಾಯ ಮಾಡುವುದಕ್ಕೆ ಅವಕಾಶವಿತ್ತು, ಅದನ್ನು ನೀವು ಏತಕ್ಕೆ ಕಸಿದುಕೊಳ್ಳುತ್ತಿದ್ದೀರಿ, ಇದರಿಂದಾಗಿ ನಾವು ಇನ್ನು ಮುಂದೆ ಮತದಾರರಿಗೆ ಸರಿಯಾದ ರೀತಿಯಲ್ಲಿ ಸಹಾಯ ಮಾಡುವುದಕ್ಕಾಗುವುದಿಲ್ಲ, ಆದ್ದರಿಂದ ದಯವಿಟ್ಟು ಹಿಂದೆ ಇದ್ದಂಥ ಮಾನ್ಯತೆಯನ್ನೇ ಮುಂದುವರಿಸಿಕೊಂಡು ಹೋಗಿ ಎಂದರೆ , ಇದಕ್ಕೆ ಕಾನೂನು ಅಡಚಣೆ ಇದೆ ಎಂದು ತಮ್ಮ ಛೇಂಬರ್‌ನಲ್ಲೇ ತಾವೇ ಹೇಳಿದಿರಿ. ಇದು ಪಂಚಾಯಿತ್ ಆಕ್ಟ್‌ಗೆ ವಿರುದ್ಧವಾಗಿ ಆಗುತ್ತದೆಂದು ಹೇಳುತ್ತಿದ್ದೀರಿ. ಈಗಾಗಲೇ ಒಂದು ತಪ್ಪು ಭಾವನೆ ಹೋಗಿದೆ. ಶಾಸಕರು ತಾಲ್ಲೂಕು ಪಂಚಾಯಿತ್‌ಗೆ ಮಂಡಲ ಪಂಚಾಯತ್‌ಗೆ ಮತ್ತು ಜಿಲ್ಲಾ ಪಂಚಾಯಿತಿಗೆ ಇರತಕ್ಕ ಹಕ್ಕನ್ನು ಕಸಿದುಕೊಂಡು ಎಂ ಎಲ್.ಎ ಗಳೇ ಚಲಾಯಿಸುವುದಕ್ಕೆ ಹೊರಟಿದ್ದಾರೆ, ಅದಕ್ಕಾಗಿಯೇ ಇವರು ಧರಣಿ ಮಾಡುತ್ತಿದ್ದಾರೆ ಎನ್ನತಕ್ಕ ಭಾವನೆಯನ್ನು ಮೂಡಿಸುವಂಥ ರೀತಿಯಲ್ಲಿ ಅನೇಕ ಪತ್ರಿಕೆಗಳಲ್ಲಿ ಬಂದಿವೆ, ಅಲ್ಲದೆ ಅವರೂ ಕೂಡ ಪದೇ ಪದೇ ಹೇಳುತ್ತಿದ್ದಾರೆ. ನಾನು ಒಂದು ಮಾತನ್ನು ಸ್ಪಷ್ಟಪಡಿಸುತ್ತೇನೆ. ಲ್ಯಾಂಡ್ ರೆವಿನ್ಯೂ ಆಕ್ಟ್‌ಗೆ ಪಂಚಾಯಿತ್ ಆಕ್ಟ್ ಮತ್ತು

ಜಿಲ್ಲಾ ಪಂಚಾಯಿತ್ ಆ್ಯಕ್ಟ್ ಯಾವುದೂ ಕೂಡ ಸಂಬಂಧವಿಲ್ಲ. ರೆಗ್ಯುಲರೈಸೇಷನ್ ಆಫ್ ಕಮಿಟಿಸ್ ತಾವು ಏನು ಅಧ್ಯಕ್ಷರನ್ನಾಗಿ ಮಾಡುತ್ತಿದ್ದೀರಿ ಅದನ್ನು ಲ್ಯಾಂಡ್ ರೆವಿನ್ಯೂ ಆ್ಯಕ್ಟ್ ಕೆಳಗೆ ಮಾಡುತ್ತಿದ್ದೀರಿ. ಆ ಆ್ಯಕ್ಟ್‌ನ ವ್ಯಾಪ್ತಿಯಲ್ಲಿ ಬರತಕ್ಕ ಜಮೀನು ಆ ಕಾನೂನಿನ ಅಡಿಯಲ್ಲೇ ಬರುತ್ತದೆಯೇ ಹೊರತು ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಅಡಿಯಲ್ಲಿ ಬರುವುದಿಲ್ಲ. ವಿಲೇಜ್ ಅಕೌಂಟೆಂಟ್ ಹಣಯನ್ನು ಬರೆಯುತ್ತಾನೆ ರೆವಿನ್ಯೂ ಇನ್‌ಸ್ಪೆಕ್ಟರ್ ಇನ್‌ಸ್ಪೆಕ್ಷನ್ ನೋಟ್ ಬರೆಯುತ್ತಾನೆ, ತಹಸಿಲ್ದಾರ್‌ರವರು ಮ್ಯುಟೇಷನ್ ಬರೆಯುತ್ತಾರೆ. ಆದರೆ ಆ ಕೆಲಸವನ್ನು ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಯಲ್ಲಿ ಮಾಡುವುದಕ್ಕೆ ಬರುವುದಿಲ್ಲ. ಲ್ಯಾಂಡ್ ಗ್ರ್ಯಾಂಟ್ ಮಾಡತಕ್ಕ ಅಧಿಕಾರ ನಮ್ಮ ಲ್ಯಾಂಡ್ ರೆವಿನ್ಯೂ ಆ್ಯಕ್ಟ್‌ನಲ್ಲಿ ಇದೆಯೇ ಹೊರತು ತಾಲ್ಲೂಕು ಪಂಚಾಯಿತಿಯಲಿಲ್ಲ. ಆ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರತಕ್ಕ ಜಮೀನುಗಳು, ಬೌಂಡರೀಸ್‌ನಲ್ಲಿರತಕ್ಕ ಜಮೀನು ಅವರಿಗೆ ಸೇರಿರಬಹುದೇ ಹೊರತು ಉಳಿದಂಥ ರೆವಿನ್ಯೂ ಲ್ಯಾಂಡ್, ಫಾರೆಸೆಟ್ಸ್‌ಲಾಂಡ್ಸ್ ಇನ್ನೂ ಮುಂತಾದ್ದು ಅದಕ್ಕೆ ಸೇರಿಲ್ಲ. ಈಗ ಪ್ಲಾಂಟೇಷನ್‌ನವರು ಎನ್‌ಕ್ರೋಚ್ ಮಾಡಿಕೊಂಡಿರತಕ್ಕ ಜಮೀನನ್ನು ನಾವು ರೆಗ್ಯೂಲರೈಸ್ ಮಾಡುತ್ತಿದ್ದೇವೆ. ಅದು ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿಗಳಿಗೆ ಸೇರುವುದಿಲ್ಲ. ಅಂದಮೇಲೆ ಈ ಕಾನೂನಿನಲ್ಲಿ ಯಾವುದು ಇಲ್ಲ ಅದನ್ನು ನಾವು ನಿಮಗೆ ಏತಕ್ಕೆ ಕೊಡಬೇಕು? ಈರೀತಿಯ ತಪ್ಪು ಮಾಹಿತಿಯನ್ನು ಜನತೆಗೆ ಈ ಸದನದ ಮುಖಾಂತರ ಮುಟ್ಟಿಸುತ್ತಿದ್ದೀರಿ ಇದು ತಪ್ಪು.

ಇನ್ನು ಎರಡನೆಯದಾಗಿ, ಹೌಸ್ ಸೈಟ್ಸ್ ಬಗ್ಗೆ ಹೇಳುವುದಾದರೆ, ತಮಗೆ ಗೊತ್ತಿರುವಂತೆ ಈ ಉದ್ದೇಶಕ್ಕೆ ಬೇಕಾದ ಜಮೀನನ್ನು ಇದುವರೆಗೆ ಯಾರು ಖರೀದಿ ಮಾಡುತ್ತಿದ್ದರು? ತಹಸಿಲ್ದಾರ್ ಮಾಡುತ್ತಿದ್ದರೇ? ಅಸಿಸ್ಟೆಂಟ್ ಕಮಿಷನರ್ ಮಾಡುತ್ತಿದ್ದರೇ? ಡೆಪ್ಯುಟಿ ಕಮಿಷನರ್ ಮುಖಾಂತರ ಹಣವನ್ನು ರೊಟೇಟ್ ಮಾಡಿ ಎಲ್ಲಿ ಸರ್ಕಾರಿ ಜಮೀನು ಇರುವುದಿಲ್ಲ ಅಲ್ಲಿ ಖರೀದಿ ಮಾಡಿಕೊಡುತ್ತಿದ್ದರು. ಜಿಲ್ಲಾ ಪಂಚಾಯಿತಿಯಲ್ಲಿರುವ ಪ್ರಕಾರ ಮನೆಗಳನ್ನು ಕಟ್ಟಿಸಿಕೊಡುವುದು, ಸೈಟುಗಳನ್ನು ಕೊಡತಕ್ಕದ್ದು ಅದೂ ಆ ಹಳ್ಳಿಯ ವ್ಯಾಪ್ತಿಯಲ್ಲಿ ಬರತಕ್ಕದ್ದಕ್ಕೆ ಮಾತ್ರ. ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಯಿಂದ ಖರೀದಿಮಾಡಿದಂಥ ಜಮೀನುಗಳಿಗೆ ಫಲಾನುಭವಿಗಳನ್ನು ಗುರ್ತಿಸಿ ಅವರು ಕೊಡಬಹುದು. ಅದನ್ನು ಕೊಡಿ ಎಂದು ಯಾರೂ ಕೇಳುತ್ತಿಲ್ಲ. ಅವರ ಅಧಿಕಾರ ಎಲ್ಲಿದೆ ಅಲ್ಲಿರಲಿ. ತಮಗೆ ಹೇಳುವುದಾದರೆ, ಟಾಸ್ಕ್‌ಫೋರ್ಸ್ ಕಮಿಟಿ ಏನಿದೆ ಇದಕ್ಕೆ ಬರತಕ್ಕ ಹಣ ನ್ಯಾಚುರಲ್ ಕೆಲಾಮಿಟೀಸ್ ಕೆಳಗೆ ಬರತಕ್ಕಂಥಾದ್ದು. ಈ ಟಾಸ್ಕ್‌ಫೋರ್ಸ್ ಕಮಿಟಿಯಲ್ಲಿ ಸೈಟ್ಸ್ ಕೊಡತಕ್ಕದ್ದಾಗಲಿ, ಸ್ಕೇರ್ಸಿಟಿಯ ಸಂಬಂಧದಲ್ಲಿ ಒಂದು ಬೋರ್‌ವೆಲ್‌ನ್ನು ಹಾಕತಕ್ಕದ್ದಾಗಲಿ, ಅಥವಾ ಸಣ್ಣಪುಟ್ಟ ಕೆಲಸವನ್ನು ತೆಗೆದುಕೊಳ್ಳುವುದಾಗಲಿ, ಮಾಡಬೇಕಾದರೆ ಎಕ್ಸಿಕ್ಯುಟಿವ್ ಆರ್ಡರ್ ಮುಖಾಂತರ ಹೊರಡಿಸುವಂಥಾದ್ದು. ತಾಲ್ಲೂಕ್ ಪಂಚಾಯಿತಿ ಆ್ಯಕ್ಟ್ ಮತ್ತು ಜಿಲ್ಲಾ ಪಂಚಾಯಿತಿ ಆ್ಯಕ್ಟ್ ಇದ್ದರೂ ಕೂಡ ವಿಚಾರಕ್ಕೆ ಸಂಬಂಧಪಟ್ಟಂತೆ ಕೇಂದ್ರಸರ್ಕಾರದ ಮುಕ್ಕಾಲುಭಾಗ ಹಣ, ಮತ್ತು ರಾಜ್ಯ ಸರ್ಕಾರದ ಕಾಲುಭಾಗ ಹಣ ಏನಿದೆ ಆ ಹಣವನ್ನು ಅನೇಕಸಾರಿ ಈ ಬರಗಾಲ ಬಂದ ಸಂದರ್ಭದಲ್ಲಿ ಹೇಗೆ ಉಪಯೋಗ ಮಾಡಬೇಕು ಎಂದು ಅಸಿಸ್ಟೆಂಟ್ ಕಮಿಷನರ್‌ರವರ

ಅಧ್ಯಕ್ಷತೆಯಲ್ಲಿ ನಿರ್ಣಯಿಸಿ ಕೆಲಸ ನಡೆಯುತ್ತದೆ. ಕೊನೆಗೆ ಫಲಾನುಭವಿಗಳನ್ನು ಗುರ್ತಿಸುವ ಕೆಲಸವನ್ನು ಶಾಸಕರಿಗೆ ಕೊಡಬೇಕೆಂದು ಸರ್ಕಾರಿ ಆಜ್ಞೆಯ ಮೂಲಕ ಟಾಸ್ಕ್‌ಫೋರ್ಸ್ ಮಾಡಿದೆ. ಇದಕ್ಕೂ ಕೂಡ ಸಂಬಂಧಪಡುವುದಿಲ್ಲ. ಇನ್ನು ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಸದಸ್ಯರು ಇದ್ದೇ ಇದ್ದಾರೆ. ಅದರ ಪ್ರಶ್ನೆ ಬರುವುದಿಲ್ಲ. ಹಿಂದೆ 20 ಅಂಶದ ಕಾರ್ಯಕ್ರಮದ ಅಧ್ಯಕ್ಷರಾಗಿ ಅವರು ಮಾಡುತ್ತಿದ್ದರು. ರಿವ್ಯೂ ಮಾಡುತ್ತಿದ್ದರು. ಅದು ಬಿ.ಡಿ.ಒ. ಕಛೇರಿಯಲ್ಲಿ ಎಲ್ಲೋ ಒಂದು ಕಡೆ ಇತ್ತು. ಈಗ ಅದಕ್ಕೆ ಕರ್ನಾಟಕ ಡೆವಲಪ್‌ಮೆಂಟ್ ಎಂದು ಬೇಕಾದರೂ ಹೇಳಬಹುದು. 20 ಅಂಶದ ಕಾರ್ಯಕ್ರಮ ಎಂದು ಬೇಕಾದರೂ ಹೇಳಬದುದು. ಆ ಕಾರ್ಯಕ್ರಮಕ್ಕೆ ನೀವು ಯಾವ ಹೆಸರನ್ನು ಬೇಕಾದರೂ ಕೊಡಿ. ಹೀಗೆ ವಿವಿಧ ಕಾನೂನುಗಳ ಅಡಿಯಲ್ಲಿ ವಿವಿಧ ಕರ್ತವ್ಯಗಳನ್ನು ಶಾಸಕರು ಮಾಡಲೇಬೇಕು. ಪ್ರತಿ 5ನೇ ತಾರಿಖು ಅಲ್ಲಿ ಸಭೆಯನ್ನು ನಡೆಸಲೇಬೇಕು. ನಮಗೆ ಅವತ್ತು ಬೇರೆ ಏನೇ ಕೆಲಸವಿದ್ದರೂ ಅದನ್ನು ಬಿಟ್ಟಾದರೂ ಆ ಮಿಟಿಂಗ್‌ಗೆ ಹೋಗಿ ಹಾಜರಾಗಲೇಬೇಕು. 5ನೇ ತಾರೀಖು ರಜಾದಿನವಾಗಿದ್ದರೆ 6ನೇ ತಾರೀಖು ಆ ಸಭೆಗೆ ಹೋಗಬೇಕಾಗಿತ್ತು. ಅಂದರೆ ನಮಗೆ ಒಂದು ಇತಿಮಿತಿಯನ್ನು ಗೊತ್ತುಮಾಡಿ ನೀವು ಹೇಗೆ ನಡೆದುಕೊಳ್ಳಬೇಕೆಂದು ಸೂಚಿಸಿದ ಮೇಲೆ ಮತ್ತೆ ಕಸಿದುಕೊಳ್ಳುವುದು ಬೇಡ. ಹಿಂದೆ ಇದ್ದುದನ್ನು ಹಾಗೇ ಮುಂದುವರಿಸಿ ಎಂದು ನಾವು ಕೇಳಿದರೆ ಇವರು ಏನೋ ವಿಶೇಷವಾದ ಸವಲತ್ತನ್ನು ಕೇಳುತ್ತಿದ್ದಾರೆ, ಇದಕ್ಕೆ ಸದನದ ಸಮಯ ಹಾಳಾಗಿ ಹೋಗುತ್ತಿದೆ. ಶಾಸಕರು ಇದಕ್ಕೇ ಹೋರಾಟ ಮಾಡುತ್ತಿದ್ದಾರೆ, ವಿರೋಧಪಕ್ಷದವರು ಇದಕ್ಕೇ ಎಲ್ಲರನ್ನೂ ಕೂಗುತ್ತಿದ್ದಾರೆ ಎನ್ನತಕ್ಕ ಭಾವನೆಯನ್ನು ಜನರಲ್ಲಿ ನೀವು ಮೂಡಿಸಿದರೆ ಅದು ಸರಿಯಾಗುವುದಿಲ್ಲ.

ಶಾಸಕರು ತಮ್ಮ ಅನುಕೂಲಕ್ಕಾಗಿ ಹೋರಾಟ ಮಾಡುತ್ತಿದ್ದಾರೆಂಬ ಭಾವನೆಯನ್ನು ಜನರಲ್ಲಿ ನೀವಾಗಿಯೇ ಮಾಡಿಸುತ್ತಿದ್ದೀರಿ. ಈ ಮಾತು ಕೇವಲ ನಮಗೆ ಮಾತ್ರ ಅನ್ವಯಿಸುವುದಿಲ್ಲ. ಆ ಕಡೆ ಇರತಕ್ಕ ಶಾಸಕರೂ ಕೂಡ ನಮ್ಮ ಮಾನ್ಯತೆಯನ್ನು ಉಳಿಸಿಕೊಂಡು ಕೆಲಸ ಮಾಡಬೇಕೆಂಬ ಅಪೇಕ್ಷೆ ಇದೆ. ಇವತ್ತು ಕೇವಲ ವಿರೋಧಪಕ್ಷದ ಸದಸ್ಯರು ಮಾತ್ರ ಇದನ್ನು ಕೇಳುತ್ತಿಲ್ಲ. ಇಂಥ ಒಂದು ಭಾವನೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ಏತಕ್ಕೆ ತಾಳಿದ್ದಾರೋ ಗೋತ್ತಿಲ್ಲ. ಈ ಸಮಸ್ಯೆಗಳನ್ನು ಬಗೆಹರಿಸಬೇಕೆಂಬ ಉದ್ದೇಶದಿಂದ 2-3 ಸಾರಿ ಸಭೆ ಸೇರಿದೆವು. ಇದು ಕಾನೂನಿನ ಅಡಿಯಲ್ಲಿ ಬರುವುದಿಲ್ಲವೆಂಬುದನ್ನೂ ನಾವು ತಮಗೆ ಹೇಳಿಕೊಟ್ಟಿದ್ದೇವೆ. ಆದರೂ ಕೂಡ ನಾನು ಕಾನೂನುಇಲಾಖೆಯಿಂದ ಎಕ್ಸಾಮಿನ್ ಮಾಡಿಸುತ್ತೇನೆ, ಆಮೇಲೆ ಕಾನೂನು ಮಂತ್ರಿಗಳ ಜೊತೆ ಪ್ರಸ್ತಾಪಮಾಡಿ ಎಕ್ಸಾಮಿನ್ ಮಾಡಿಸಿ ಹೇಳುತ್ತೇನೆಂದು ಹೇಳಿದರು. ಆದರೆ ಅದು ನಿಮ್ಮಿಂದಲೂ ಕೂಡ ಲಿಖಿತಮೂಲಕ ಏನೂ ನಮಗೆ ಬರಲಿಲ್ಲ. ಇಂಥ ಸೆಕ್ಷನ್ ಕೆಳಗೆ ಇದು ಬರುತ್ತದೆ ಅಥವಾ ಬರುವುದಿಲ್ಲ ಎನ್ನುವುದನ್ನೂ ಕೂಡ ತಾವು ನಮಗೆ ಹೇಳಲಿಲ್ಲ. ಇದರ ಬಗ್ಗೆ ಅವರು ಹೆಚ್ಚಿನ ಆಸಕ್ತಿಯನ್ನು ವಹಿಸುತ್ತಿಲ್ಲ ಎಂಬುದನ್ನು ಇದು ತೋರಿಸುತ್ತದೆ. ನೀವು ಮಾಡತಕ್ಕ ಎಲ್ಲ ಕೆಲಸಗಳಲ್ಲಿ ನೀವು ಭಾಗವಹಿಸಬಾರದು ಎಂದು ಹೇಳುತ್ತಿದ್ದೀರಿ. ನಾವು ನಮ್ಮ ಕೆಲಸದಲ್ಲಿ ಭಾಗವಹಿಸಲು ಅವಕಾಶ ಮಾಡಿಕೂಡಿ ಎಂದು ಕೇಳುತ್ತಿದ್ದೇವೆ. ಸಾಮಾನ್ಯ ಜನರಿಗೆ, ನಾಗರೀಕರಿಗೆ ಸಹಾಯ ಮಾಡಬೇಕೆಂಬುದು ಸರ್ಕಾರದ ಏನು ಕಾರ್ಯಕ್ರಮ ಇದೆ ಆ

ಕಾರ್ಯಕ್ರಮದಲ್ಲಿ ನಾವೂ ಕೂಡ ಭಾಗಿಗಳಾಗಿ ಜನರಿಗೆ ಸಹಾಯ ಮಾಡುತ್ತೇವೆ. ಕೆಲಸ ಮಾಡುತ್ತೇವೆಂದು ನಾವು ಮುಂದೆ ಬರುತ್ತಿದ್ದೇವೆ. ಆದರೆ ನಿಮ್ಮ ಸಹಾಯವೇ ಬೇಡ, ನೀವು ಮುಂದೆ ಬರುವುದೇ ಬೇಡ, ಇದರಲ್ಲಿ ನೀವು ಭಾಗವಹಿಸುವುದೇ ಬೇಡ ಎನ್ನತಕ್ಕ ವಾದ ನಿಮ್ಮದಾಗಿದ್ದರೆ ಖಂಡಿತವಾಗಿ ನೀವೇ ಮಾಡಿಕೊಳ್ಳಿ, ನಮ್ಮ ಅಭ್ಯಂತರವಿಲ್ಲ. ಇಲ್ಲಿ ನಾವು ಧರಣಿ ಮುಂದುವರೆಸಿಕೊಂಡು, ಪದೇ ಪದೇ ನಾವು ಕೇಳುತ್ತಿರುವುದೂ ಬೇಸರವಾಗಿದೆ. ಇದು ನಮಗೆ ಎಷ್ಟೋ ಸಾರಿ ಅಸಹ್ಯವಾಗಿ ಇದನ್ನು ಏತಕ್ಕೆ ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇವೋ ಅನ್ನಿಸುತ್ತಿದೆ. ಏಕೆಂದರೆ, ಕಾನೂನಿನಲ್ಲಿರತಕ್ಕದ್ದನ್ನು ಸರ್ಕಾರೀ ಆಜ್ಞೆಯಲ್ಲಿರತಕ್ಕದ್ದನ್ನು ಈ ಶಾಸಕರ ಕರ್ತವ್ಯ ಹೀಗಿದೆ ಎಂದು ನೀವೇ ತೋರಿಸಿಕೊಟ್ಟಿದ್ದನ್ನು ನಾವು ಮಾಡಬೇಕಾದರೆ ಇದಕ್ಕಾಗಿ ಇಲ್ಲಿ ನಿಮ್ಮನ್ನು ಕೇಳಿಕೊಳ್ಳುವ, ಧರಣಿ ಮಾಡುವ ಪರಿಸ್ಥಿತಿ ಬಂದಿರಬೇಕಾದರೆ ಖಂಡಿತವಾಗಿ ಇದರ ಬಗ್ಗೆ ನಾನು ಯಾವ ಪದವನ್ನು ಉಪಯೋಗಿಸಬೇಕೋ ಗೊತ್ತಾಗುತ್ತಿಲ್ಲ. ಮೊನ್ನೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಹುಷಾರು ಇರಲಿಲ್ಲವೆಂದು ತಿಳಿದ ಮೇಲೆ ನಮ್ಮ ಧರಣಿ ಸತ್ಯಾಗ್ರಹವನ್ನು ಅಲ್ಲಿಗೆ ಮುಕ್ತಾಯ ಮಾಡಿದ್ದೇವೆ, ತಾವು ಕೂಡ ತಮ್ಮ ಕೊಠಡಿಗೆ ಕರೆದು ಇದರ ಬಗ್ಗೆ ಮಾತನಾಡುತ್ತೇನೆಂದು ಹೇಳಿದಿರಿ. ಇದನ್ನು ಯಾವರೀತಿ ಬಗೆಹರಿಸುತ್ತೀರೋ ಅದು ತಮಗೆ ಬಿಟ್ಟಿದ್ದುದು. ಇನ್ನು ಮುಂದೆ ಇದರ ಬಗ್ಗೆ ತಮ್ಮನ್ನು ಕೇಳುವುದಕ್ಕೆ ಬರುವುದಿಲ್ಲ.

ನಾವು ಇದರಲ್ಲಿ ಪಾರ್ಟಿಸಿಪೇಟ್ ಮಾಡುತ್ತೇವೆ. ಏಕೆಂದರೆ ನಮ್ಮ ಪಾರ್ಟಿಸಿಪೇಷನ್ ನಿಮಗೆ ಬೇಕಾಗಿಲ್ಲ. ಭಾಗವಹಿಸುವುದು ನಿಮಗೆ ಚೆನ್ನಾಗಿಲ್ಲವೆಂದರೆ ನೀವು ಆ ರೀತಿಯಾಗಿ ಮಾಡಿಕೊಳ್ಳಿ. ಇನ್ನೊಂದು ಸಂಶಯ ಬಂದಿರಬೇಕೆಂದು ನನಗನ್ನಿಸುತ್ತದೆ. ಅದೇನೆಂದರೆ, ವಿರೋಧ ಪಕ್ಷದಲ್ಲಿರುವವರು ಸುಮಾರು 108-110 ಜನರಿದ್ದಾರೆ. ಇವರು ವಿರೋಧಪಕ್ಷದಲ್ಲಿರುವವರು ಇಷ್ಟು ಜನ ಅಧ್ಯಕ್ಷರು, ಇಷ್ಟು ಜನ ಸದಸ್ಯರಾದರೆ ನಮ್ಮಲ್ಲಿರತಕ್ಕವರು 60-70 ಜನ ಉಳಿಯುತ್ತಾರೆ. ಏಕೆಂದರೆ ಬಹಳಷ್ಟು ಮಂದಿ ಮಂತ್ರಿಗಳು, ಅಧ್ಯಕ್ಷರು, ಉಪಾಧ್ಯಕ್ಷರು, ಚೀಫ್ ವಿಪ್ ಇವರು ಯಾರೂ ಕೂಡ ಹೋಗುವುದಿಲ್ಲ. ಕೊನೆಗೆ ಬಹಳಷ್ಟು ಜನ ಅಧ್ಯಕ್ಷರಾಗುತ್ತಾರೆ. ಹೀಗಾಗಿ ಕೊನೆಗೆ 50-60 ಜನ ಉಳಿಯುತ್ತಾರೆ.

ಅಧ್ಯಕ್ಷರು: ನನ್ನನ್ನು ಅವರ ಪಟ್ಟಿಗೆ ಹಾಕಿದ್ದೀರಾ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಕ್ಷಮಿಸಿ, ನಾನು ಅದನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಹೀಗಾಗಿ ಕೊನೆಗೆ 30-40 ಜನ ಉಳಿಯುತ್ತಾರೆ. 30-40 ಜನರಿಗೆ ಏಕೆ ನಾವು ಹೇಳಿದ ಹಾಗೆ ಆಯಿತು ನಮ್ಮ ಅಧಿಕಾರಿಗಳು ಇರುತ್ತಾರೆ, ನಾವು ಏನು ಬೇಕೋ ಅದನ್ನು ಚಲಾವಣೆ ಮಾಡಿಕೊಳ್ಳಬಹುದು. ನಮ್ಮ ಅಧಿಕಾರ ನಡೆಸಿಕೊಂಡು ನಿಮಗೆ ಸಹಾಯ ಮಾಡುತ್ತೇವೆ ಅಥವಾ ನೀವು ಬೇಕಾದ ಕೆಲಸಗಳನ್ನು ಮಾಡಬಹುದೇ ಹೊರತು ಏಕೆ ಇದಕ್ಕೆ ಆಸ್ಪದ ಕೊಡುತ್ತೀರೆಂಬ ಭಾವನೆ ಮೂಡಿದೆ ಏನೋ ಗೊತ್ತಿಲ್ಲ. ಈ ರೀತಿ ಭಾವನೆ ಮಾಡತಕ್ಕದ್ದು ಸರಿಯಲ್ಲ. ಅವರು ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ವಾಟಾಳ್ ನಾಗರಾಜ್ ಅವರು ವಿನಂತಿ ಮಾಡಿಕೊಂಡರು. ನಾನು ವಿನಂತಿ ಗಿನಂತಿ ಮಾಡಿಕೊಳ್ಳುವುದಿಲ್ಲ. ಅವರ ಹಕ್ಕು ಅಷ್ಟೇ ನಮ್ಮದು. ನಾವು ಎಲ್ಲರ ಬಗ್ಗೆ ಕೇಳುತ್ತಿದ್ದೇವೆ.

ಕೇವಲ ನಮ್ಮ ಬಗ್ಗೆ ಕೇಳುತ್ತಿಲ್ಲ. ಇಡೀ ಸದನದಲ್ಲಿರತಕ್ಕ ಸದಸ್ಯರ ಬಗ್ಗೆ ನಾವು ಕೇಳುತ್ತಿದ್ದೇವೆ. ಕೊಟ್ಟದ್ದು ಉಳಿಸಿಕೊಂಡು ಹೋಗಿ, ಉಳಿಸುವುದಿಲ್ಲ, ಬೇಡ ನಮಗೆ ಅದೇ ಮಾರ್ಗ ಇದೆ ಎಂದರೆ ಅದು ನಿಮಗೆ ಬಿಟ್ಟಿದ್ದುದು. ಇದಕ್ಕೆ ಪ್ರೊಟೆಸ್ಟ್ ಮಾಡಿ ವಾಕ್‌ಔಟ್ ಮಾಡುತ್ತೇವೆಂದು ಹೇಳಿದ್ದೇವೆ. ಏಕೆಂದರೆ ಧರಣಿ ಕುಳಿತರೆ ತಮ್ಮ ಮನಸ್ಸಿಗೆ ಕೂಡ ನೋವಾಗುತ್ತದೆ. ಪದೇ ಪದೇ ಇದೇ ಕೆಲಸ ಮಾಡುತ್ತೇವೆಂಬ ಭಾವನೆ ತಮಗೂ ಬರಬಾರದು. ಏಕೆಂದರೆ ನಮಗೆ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕಾಗಿ ತಮಗೆ ಅಭಿನಂದಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ಕಾಂಗ್ರೇಸ್ಸಿನ ಮಾನ್ಯ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

Sri Qamarul Islam (Gulbarga) : Sir, on saturday, Mr. Vatal Nagaraj raised an issue regarding the privileges of the MLAs. The intention was not to oppose the reply which is to be given by the hon'ble Chief Minister but to see that the elected representatives should work in their constituencies at the larger interest of the people. Sir, now the opposition has decided to walk out, and then come for the Governor's address. Sir, from now onwards we will not pressurise. Let them give the privileges or not, it is for the wisdom of the Government. It was our right. In this House, through you, sir, we have demanded. Discussion had taken place in your chamber and it was assured but now it is left to the Government and the Hon'ble Cheif Minister. With this I am with the Opposition and I will also walk out.

ಶ್ರೀ ಎಸ್. ಬಂಗಾರಪ್ಪ : (ಸೊರಬ) ಮಾನ್ಯ ಅಧ್ಯಕ್ಷರೆ, ಈಗಾಗಲೇ ವ್ಯಕ್ತ ಪಡಿಸಿರತಕ್ಕ ಮಾನ್ಯ ಸದಸ್ಯರುಗಳ ಅಭಿಪ್ರಾಯಕ್ಕೆ ಧ್ವನಿಗೂಡಿಸತಕ್ಕ ಕಾರ್ಯಕ್ರಮ ಮಾತ್ರ ನನ್ನದು. ಇದರಲ್ಲಿ ಅಡಗಿರತಕ್ಕ ಒಂದು ಮೂಲಭೂತ ನೀತಿಯನ್ನು ಕೂಡ ಪ್ರತಿಪಾದನೆ ಮಾಡಿದ್ದಾರೆ. ಅದಕ್ಕಾಗಿ ನಾನು ನಮ್ಮ ಸ್ನೇಹಿತರನ್ನು ಅಭಿನಂದಿಸುತ್ತೇನೆ. ಸಹಜವಾಗಿ ಇಂಥ ವಿಷಯದಲ್ಲಿ ಭಿನ್ನಾಭಿಪ್ರಾಯ ಬರತಕ್ಕದ್ದು ಸಹಜ. ತಮ್ಮ ಕಾರ್ಯಾಲಯದಲ್ಲಿ ಮಾತನಾಡತಕ್ಕ ಸಂದರ್ಭ ಇರಬಹುದು ಅಥವಾ ಹೊರಗಡೆ ಇರಬಹುದು. ಒಬ್ಬೊಬ್ಬ ವ್ಯಕ್ತಿಯ ಚಿಂತನೆ ಕೆಲವೊಮ್ಮೆ ಪಕ್ಷಿಗಳ ಬಹುಮತದ ರೂಪದಲ್ಲಿ ಅಥವಾ ಅಲ್ಪಮತ ರೂಪದಲ್ಲಿ ಪ್ರಕಟವಾಗತಕ್ಕ ಸಂದರ್ಭವನ್ನು ನಾವು ಕಾಣುತ್ತೇವೆ. ಇದು ಪ್ರಜಾಪ್ರಭುತ್ವದ ಮೂಲಭೂತವಾದ ಲಕ್ಷಣ. ಸರ್ಕಾರ ಒಂದು ಪಕ್ಷದ್ದು ಇದ್ದಾಗ ನಾವು ಜನರ ಹಿತರಕ್ಷಣೆ ಮಾಡುವುದಕ್ಕೋಸ್ಕರ ಯಾರ ಕೈಗೆ ಅಧಿಕಾರ ಕೊಟ್ಟಿದ್ದರೆ ಅದು ಎಲ್ಲಾ ಜನತೆಗೆ, ಕೊನೇ ಪಕ್ಷ ಬಹು ಜನರಿಗೆ ಅದು ಒಳಿತು ಎನ್ನತಕ್ಕ ಪ್ರಶ್ನೆ ನಮ್ಮ ಮುಂದಿರತಕ್ಕದ್ದು. ಇದು ಹೊಗಳಿಕೆಯ ಪ್ರಶ್ನೆ ಅಲ್ಲ ಕರ್ತವ್ಯದ ಪ್ರಶ್ನೆ. ಒಂದು

ಮೂಲಭೂತ ನೀತಿಯ ಪ್ರಶ್ನೆ. ನಾನು ಈ ನೀತಿಯ ವಿಚಾರವನ್ನು ಮಾತ್ರ ಮಾತನಾಡುತ್ತಿದ್ದೇನೆ. ಅದನ್ನು ಕಾರ್ಯರೂಪಕ್ಕೆ ಇಳಿಸತಕ್ಕ ಸಂದರ್ಭದಲ್ಲಿ ಸಹಜವಾಗಿ ಜಾರಿಗೆ ಕೊಡತಕ್ಕ ಕ್ಷೇತ್ರದಲ್ಲಿರತಕ್ಕ ನ್ಯೂನತೆಗಳ ಕಾರಣದಿಂದ ಲೋಪದೋಷ ಉಂಟಾಗತಕ್ಕದ್ದು ಸಹಜ. ಯಾವುದೇ ದೇಶದ ರಾಜಕಾರಣದಲ್ಲಿ ಕೂಡ ಅದೆಲ್ಲ ನಡೆಯುತ್ತದೆ. ಸ್ವಾತಂತ್ರ್ಯ ಬಂದಮೇಲೆ ಇವತ್ತು ಏನು ಬ್ಯೂರೋಕ್ರಸಿ ಇದೆ ಒಂದು ಅಧಿಕಾರ ವರ್ಗದ ಮುಖಾಂತರ ನಾವು ನಮ್ಮ ಕಾರ್ಯಕ್ರಮವನ್ನು ನಡೆಸತಕ್ಕ ವ್ಯವಸ್ಥೆಯನ್ನು ಇಟ್ಟುಕೊಂಡಿದ್ದೇವೆ. ಅದು ಎಕ್ಸಿಕ್ಯೂಟೀವ್ ಮುಖಾಂತರ. ನಾವು ಅದನ್ನು ಮಾಡಲೇಬೇಕಾಗುತ್ತದೆ. ಹಾಗೆ ಮಾಡತಕ್ಕ ಸಂದರ್ಭದಲ್ಲಿ we have to repose let of confidence in our own officers. ಅದು ತಪ್ಪಲ್ಲ. ಆದರೆ ಅದು ದುರುಪಯೋಗವಾದರೆ ಏನು ಎಂಬ ಪ್ರಶ್ನೆ. ಇವತ್ತು ನಾವು ಜನರ ಪ್ರತಿನಿಧಿಗಳ ಬಗ್ಗೆ. ಮಾತನಾಡುತ್ತೇವೆ. ಇದು ಪಕ್ಷಾತೀತವಾಗಿ ಹೇಳತಕ್ಕ ಮಾತು. ಬರೀ ಒಂದು ವರ್ಷಕ್ಕೆ ಸೀಮಿತವಾದ ವಿಚಾರವಲ್ಲ. ಪ್ರಜಾಪ್ರಭುತ್ವದಲ್ಲಿ ಇಲ್ಲಿದ್ದವರು ಅಲ್ಲಿ ಕುಳಿತುಕೊಳ್ಳಬೇಕಾಗುತ್ತದೆ. ಜನರ ತೀರ್ಪಿಗೆ ಅನುಗುಣವಾಗಿ ಚುನಾವಣಾ ಕಾಲದಲ್ಲಿ ಇಲ್ಲಿದ್ದವರು ಅಲ್ಲಿ ಬರಬೇಕಾಗುತ್ತದೆ. ಅದು ಇಲ್ಲಿ ಇರಬಹುದು, ಲೋಕಸಭೆಯಲ್ಲಿ ಇರಬಹುದು. ಯಾವುದೇ ಒಂದು ಸ್ಥಾನ ಇದ್ದರೂ ಕೂಡ ಅದು ನೀತಿಯ ಪ್ರಶ್ನೆ. ಇವತ್ತು ನೀವು ಕೆಲವು ಸಮಿತಿಗಳ ಅಧಿಕಾರಗಳನ್ನು ಅಧಿಕಾರಿಗಳಿಗೆ ಕೊಡತಕ್ಕ ವಿಚಾರವನ್ನು ಇಟ್ಟಿದ್ದೀರಿ. ತಮ್ಮ ಹೇಳಿಕೆ ಪತ್ರಿಕೆಗಳ ಮೂಲಕ ಬಂದಿರತಕ್ಕದ್ದು ಇತ್ಯಾದಿ, ಇತ್ಯಾದಿ. ನಾನು ನೀವು ನಂಬುವುದನ್ನು ತಪ್ಪು ಎಂದು ಹೇಳುತ್ತಿಲ್ಲ. ಎಲ್ಲಾ ಅಧಿಕಾರಿಗಳು ತಪ್ಪಿತಸ್ಥರು ಎಂಬ ಮಾತನ್ನು ನಾನು ಆಡಲಾರೆ. ಆದರೆ ಆ ಪ್ರಯೋಗವನ್ನು ಸ್ವಾತಂತ್ರ್ಯಾನಂತರ ನಾವು ಸಾಕಷ್ಟು ಪ್ರಮಾಣದಲ್ಲಿ ಮಾಡಿದ್ದೇವೆ. ಜನರ ಪ್ರತಿನಿಧಿಗಳೇ ಅಧ್ಯಕ್ಷರಾಗತಕ್ಕ ಸಮಿತಿಗಳಲ್ಲಿ ಇವತ್ತು ಜನರ ಪ್ರತಿನಿಧಿಗಳನ್ನು ದೂರ ಇಟ್ಟು ಅಧಿಕಾರ ಕೊಡುವುದು ಒಂದೇ ಒಂದು ದಾರಿ ಉಳಿದಿರಬೇಕಾದರೆ ಅಧಿಕಾರಿಗಳಿಗೆ ಕೊಡಬೇಕಾಗುತ್ತದೆ. ಈ ಪ್ರಯೋಗ ಇದು ನೂತನ ಪ್ರಯೋಗ ಅಲ್ಲ. ಆ ಪ್ರಯೋಗ ಮೊದಲೇ ಆಗಿತ್ತು. ಕಾರ್ಯಕ್ರಮಗಳು ವಿನೂತನವಾಗಿ ಕಂಡಿರಬಹುದು. ಸಮಿತಿಗಳು ಆ ಕಾರ್ಯಕ್ರಮಕ್ಕೆ ಅನುಗುಣವಾಗಿ ರಚನೆಯಾಗಿರಬಹುದು. ಆದರೆ ಪ್ರಯೋಗ ಮಾತ್ರ ಯಾವ ವರ್ಗದ ಜನರ ಕೈಗೆ ಅಧಿಕಾರ ಕೊಡುತ್ತಿದ್ದೇವೆ ಅದು ಹಳೆಯ ಪ್ರಯೋಗ. ಅದು ಹೊಸ ಪ್ರಯೋಗ, ಹೊಸ ಚಿಂತನೆಯ ಅಡಿಪಾಯದ ಮೇಲೆ ಅದು ಒಡಮಾಡಿ ಬಂದಿರತಕ್ಕ ವಿಚಾರಧಾರೆ ಆಗಲಾರದು. ಅದಕ್ಕಾಗಿ ಇದು ಹೊಗಳಿಕೆ ಅಲ್ಲ, ಇದು ನನ್ನ ಕರ್ತವ್ಯ ಎಂಬ ದೃಷ್ಟಿಯಿಂದ ನಾನು ಅಧಿಕಾರದಲ್ಲಿದ್ದ ಕಾಲದಲ್ಲಿ ನಾವು ಕೆಲವು ಕಾರ್ಯಕ್ರಮಗಳನ್ನು ರೂಪಿಸಿದ್ದೇವು. ಇಪ್ಪತ್ತು ಅಂಶಗಳ ಆರ್ಥಿಕ ಕಾರ್ಯಕ್ರಮ ನಮ್ಮ ಕಾಲದಲ್ಲಿ ಮಾಡಿದ್ದುದು ಅಲ್ಲ. ಅದು ನಮಗಿಂತ ಮೊದಲೇ ಇತ್ತು; ನಾವೆಲ್ಲ ಅಧಿಕಾರಕ್ಕೆ ಬರುವುದಕ್ಕೆ ಮುಂಚೆಯೇ ಇತ್ತು. ಜನರ ಪ್ರತಿನಿಧಿಗಳು ಅಧ್ಯಕ್ಷರಾಗಿರಬೇಕೆಂದರೆ ಅರ್ಥ ಏನು? ಹಾಗಾದರೆ ಈ ಒಂದು ವಿಚಾರ ಧಾರಣೆ ಧ್ವನಿಗೂಡಿಸತಕ್ಕ ಚಿಂತನೆಯುಳ್ಳ ಬುದ್ಧಿ ಜೀವಿಗಳು ಅಲ್ಲಿಯೂ ಕೂಡ ನಮಗಿಂತ ಮೊದಲೇ ಇದ್ದರು ಎಂಬುದು ನಿರ್ಮಿತವಾದ. ಅದಕ್ಕಾಗಿ ಜನರ ಪ್ರತಿನಿಧಿಗಳ

ಕೈಯಲ್ಲಿ ಅಧಿಕಾರವನ್ನು ಇಪ್ಪತ್ತು ಅಂಶಗಳು ಆರ್ಥಿಕ ಕಾರ್ಯಕ್ರಮಗಳ ಬಗ್ಗೆ ಕೊಟ್ಟರೆ ಉಳಿದವನ್ನು ಏತಕ್ಕೆ ಕೊಡಬಾರದೆಂಬ ವಿಚಾರವನ್ನು ನಾವು ಆಲೋಚನೆ ಮಾಡಿದೆವು. ಅದಕ್ಕಾಗಿ ಆರಾಧನಾ ಸಮಿತಿ, ಆಶ್ರಯ ಸಮಿತಿ, ಟಾಸ್ಕ್‌ಫೋರ್ಸ್ ಸಮಿತಿ, ಅನಂತರ ಅಕ್ರಮ ಸಕ್ರಮಗೊಳಿಸತಕ್ಕ ಸಮಿತಿಗಳು ಇವುಗಳನ್ನು ಪಕ್ಷಾತೀತವಾಗಿ ಕೊಟ್ಟೆವು. ನಾವು ಅಧಿಕಾರದಲ್ಲಿದ್ದಾಗ ತಾವು ಈ ಕಡೆ ಕುಳಿತಿದ್ದಿರಿ. ನಾವು 180 ಜನರಿದ್ದೆವು ಎಂಬ ಕಾರಣದಿಂದ ಆ ಕಾಲಕ್ಕೆ ಆ ವಿಚಾರವನ್ನು ಇಟ್ಟು ಮಾತನಾಡುತ್ತಿಲ್ಲ, ಎಷ್ಟೇ ಜನರಿರಬಹುದು, ಆ ಸಂದರ್ಭದಲ್ಲಿ ಅಧಿಕಾರವನ್ನು ನಾವು ಕೊಡತಕ್ಕ ಕಾಲದಲ್ಲಿ ಎಲ್ಲಿಯಾದರೂ ಒಪ್ಪುತಪ್ಪುಗಳು ನಡೆದಿವೆ, ನಾನು ಇಲ್ಲ ವೆಂದು ಹೇಳುವುದಿಲ್ಲ. ಓಹೋ, ತಪ್ಪುನಡೆದಿದೆ ಎಂದು ವಾಸ್ತವಾಂಶಕ್ಕಿಂತ ಮಿತಿಮೀರಿರತಕ್ಕದ್ದು ಎಂಬ ಕೂಗೇ ದೊಡ್ಡದಿದ್ದರೆ ನಾನು ಕೇಳುತ್ತಿದ್ದೇನೆ, ಆ ಕಾಲದಲ್ಲಿ ತಾವು ಶಾಸಕರಾಗಿ 25 ಜನರು ಇಲ್ಲಿ ಕುಳಿತಿದ್ದಿರಿ. ಆಗ ಇಲ್ಲಿ ಇದ್ದವರು ತಾವು ಕೆಲವರು ಸಚಿವರಾಗಿದ್ದೀರಿ. ಹಾಗಾದರೆ ಇವರು ಯಾವ ತಪ್ಪು ಮಾಡಿದ್ದರು? ಈಗ ಏನು ಸಚಿವರಾಗಿದ್ದೀರಿ ನೀವು ನಿಮ್ಮ ನಿಮ್ಮ ಕ್ಷೇತ್ರದಲ್ಲಿ ಏನು ತಪ್ಪು ಮಾಡಿದ್ದೀರಿ ನಿಮ್ಮ ಕ್ಷೇತ್ರದಲ್ಲಿ ಸಮಿತಿ ಸಭೆ ಇದ್ದ ಕಾಲದಲ್ಲಿ ಕ್ಷೇತ್ರಕ್ಕೆ ಹೋದರೆ ಜನರು ನೂಕುನುಗ್ಗಲು ಅಥವಾ ಬಂದು ಮುತ್ತಿಡುತ್ತಿದ್ದರು. ಏನೋ ಸೈಟು ಸಿಕ್ಕೀತು, ಮನೆ ಸಿಕ್ಕೀತು, ಊರಿಗೆ ದೇವಸ್ಥಾನ ಸಿಕ್ಕೀತು, ಭೂಮಿ ಹಕ್ಕುಪತ್ರ ಸಿಕ್ಕೀತು ಎಂಬ ಆಸೆಯಿಂದ ಜನರು ಬರುತ್ತಿದ್ದರು. ಅವರ ಆಸೆ ಆಕಾಂಕ್ಷೆಗಳನ್ನು ಸಂಪೂರ್ಣವಾಗಿ ನೆರವೇರಿಸತಕ್ಕ ಸರ್ವಶಕ್ತಿ ನಿಮ್ಮಲ್ಲಿ ಇಲ್ಲದಿದ್ದರೂ ಜನರ ಆಸೆಗೆ ಸ್ಪಂದಿಸತಕ್ಕ, ಜನರ ಪ್ರತಿನಿಧಿಗಳಾಗಿ ಸ್ಪಂದಿಸತಕ್ಕ ಒಂದು ವಿಚಾರಧಾರೆಗೆ ಅನುಗುಣವಾಗಿ ಅಧಿಕಾರ ವ್ಯಾಪ್ತಿಯಲ್ಲಿ, ನಿಮ್ಮ ಚಲನವಲನ, ನಿಮ್ಮ ಕಾರ್ಯವ್ಯಾಪ್ತಿಯ ಆ ಕ್ಷೇತ್ರದಲ್ಲಿ ನಿಮ್ಮ ಕಾರ್ಯಕ್ರಮ ನಡೆಯುತ್ತಿತ್ತು ಎಂಬ ಆಸೆಯನ್ನು ನಾನಂತೂ ಆ ಕಾಲದಲ್ಲಿ ಇಟ್ಟುಕೊಂಡಿದ್ದೆ. ಅಲ್ಲಿ ಏನಾದರೂ ತಪ್ಪು ಒಪ್ಪುಗಳು ಸ್ವಲ್ಪಸ್ವಲ್ಪ ನಡೆದರೆ ದೊಡ್ಡ ವಿಚಾರ ಅಲ್ಲ.

11.40 ಎ.ಎಂ

ಅವರ ಮೇಲೆ ಕ್ರಮ ತೆಗೆದುಕೊಳ್ಳೋಣ. ಬೇಕಾದರೆ ಅದಕ್ಕೆ ನೀವು ತಿದ್ದುಪಡಿ ತೆಗೆದುಕೊಂಡು ಬನ್ನಿ ಮಾನ್ಯ ಸಭಾಧ್ಯಕ್ಷರೆ ಯಾರಾದರೂ ತಪ್ಪು ಮಾಡಿರತಕ್ಕ ಶಾಸಕರಿದ್ದರೆ ಪಕ್ಷಾತೀತವಾಗಿ ನಾನು ಹೇಳುತ್ತಿದ್ದೇನೆ, ನಮ್ಮ ಪಕ್ಷ, ತಮ್ಮ ಪಕ್ಷ ಮತ್ತೊಬ್ಬರು ಯಾರೇ ಇರಬಹುದು ಬೇಕಾದರೆ ಅವರನ್ನು ಕಾನೂನಿನ ವ್ಯಾಪ್ತಿಗೆ ತರುವುದಕ್ಕೆ ತಿದ್ದುಪಡಿ ತನ್ನಿ. ನಾವು ಸರ್ವಾನುಮತದಿಂದ ಅದಕ್ಕೆ ಬೆಂಬಲ ಕೊಡೋಣ. ಹಾಗಂತ ಹೇಳಿ ನೋಡಿ ಸಂಪೂರ್ಣವಾಗಿ ಇದೆಲ್ಲಾ ದುರುಪಯೋಗ ಆಗಿದೆ ಎನ್ನತಕ್ಕ ಅಂಶವನ್ನು ನೀವು ಹೇಳುವಹಾಗಿದ್ದರೆ ಪ್ರಜಾಪ್ರಭುತ್ವದಲ್ಲಿ ಅಧಿಕಾರಿಗಳ ಕೈಗೆ ಅಧಿಕಾರ ಕೊಡುವ ಹಾಗಿದ್ದರೆ ಹಿಂದೆ ತಪ್ಪು ಮಾಡಿಲ್ಲವೇ ಅಧಿಕಾರಿಗಳು. ಎಷ್ಟು ಸಾರಿ ನಡೆದಿಲ್ಲ. ಅದಕ್ಕಾಗಿ ನಾನು ಹೇಳುವುದು, ಇವತ್ತು ಜನರ ಪ್ರತಿನಿದಿಗಳಿಗಿಂತ ಅಧಿಕಾರಿಗಳೆ, ನಿಜ ಹೇಳಬೇಕು ಅಂದರೆ ಅದನ್ನು ಖಾರ್ಗೆಯವರು ಹೇಳಿದರು ಅಂತ ಕಾಣುತ್ತದೆ. ಆಶ್ರಯ ಸಮಿತಿಯಲ್ಲಿ ಭೂಮಿಯನ್ನು ಸೈಟ್ ಮಾಡಿ ಹಂಚತಕ್ಕ ಕಾಲದಲ್ಲಿ

ಅದು ನನ್ನ ಕಾಲದಲ್ಲಿ ನಾವೇ ಮಾಡಿದ್ದು, ಆಶ್ರಯ ಕಾರ್ಯಕ್ರಮವನ್ನು ಹುಟ್ಟಿಸಿದವರೇ ನಾವು. ತಮಗೆ ಗೊತ್ತಿರುವಹಾಗೆ, ಹಣ ಏನು ತೆಗೆದುಕೊಂಡು ಹೋಗಿ ಎಂ.ಎಲ್.ಎ.ಗಳ ಕೈಗೆ ಕೊಡುತ್ತಿರಲಿಲ್ಲ. ದಯವಿಟ್ಟು ಕ್ಷಮಿಸಬೇಕು. ದಯವಿಟ್ಟು ಆ ಆರ್ಡರನ್ನು ಓದಿ ನೋಡಿ ಮಾನ್ಯ ಸಭಾಧ್ಯಕ್ಷರೆ, ಯಾರಾದರೂ ಕೂಡ ನೋಡಿದರೆ ಗೊತ್ತಾಗುತ್ತದೆ. ನಾವು ಅಂತಿಮವಾಗಿ ಅದರ ಅಧಿಕಾರವನ್ನು ಜಿಲ್ಲಾಧಿಕಾರಿಗೇ ಇಟ್ಟಿದ್ದೇವೆ. ಆದರೆ ಜನ ಪ್ರತಿನಿಧಿ ಓವರ್ ಆಲ್ ಜವಾಬ್ದಾರಿ ತೆಗೆದುಕೊಳ್ಳಬೇಕು. ಆ ದೃಷ್ಟಿಯಿಂದ ಅವರಿಗೆ ಅಧಿಕಾರ ಇಟ್ಟರೆ ಜನರಿಗೆ ನೇರವಾಗಿ ಉತ್ತರ ಕೊಡುವುದಕ್ಕೆ ಆ ಶಾಸಕರಿಗೆ ಸಾಧ್ಯವಾಗುತ್ತದೆ. ನಾನು ಇವತ್ತು ಕೇಳುತ್ತೇನೆ, ಇವತ್ತು ಅಧಿಕಾರಿಗಳು ತಪ್ಪು ಮಾಡಿದ್ದರೆ, ಸ್ವಾಮಿ ನಾನು ಕೇಳುವುದು ಒಂದೇ ಒಂದು. ನೀವು ಯಾವ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೀರಿ? ನಮ್ಮಲ್ಲಿ ಕಾನೂನುಗಳಿವೆ. ಫೂಲ್‌ಪ್ರೂಫಾ ಅವೆಲ್ಲಾ? ಕಾನೂನು ಪ್ರಕಾರ ಒಬ್ಬ ಅಧಿಕಾರಿ ಉಳಿದುಕೊಳ್ಳುವುದಕ್ಕೆ ಸಾಧ್ಯ ಇಲ್ಲವೆ? ಅಲ್ಲಿ ಹೇಗೆ ಆ ತೊಂದರೆಗಳನ್ನು ನಾವು ಅನುಭವಿಸಿದ್ದೇವೋ ಇವತ್ತು ಅದೇ ರೀತಿಯಾಗಿ ಮತ್ತೆ ನಮ್ಮ ಅಧಿಕಾರಿಗಳ ಕೈಗೇ ಅಧಿಕಾರ ಕೊಟ್ಟರೆ ಹೇಳುತ್ತೇನೆ ನಾನು ಈಗಿರತಕ್ಕ ವ್ಯವಸ್ಥೆಯಲ್ಲಿ ತಪ್ಪು ಮಾಡತಕ್ಕ ಅಧಿಕಾರಿಗಳ ಮೇಲೆ ಸಂಪೂರ್ಣ ಜವಾಬ್ದಾರಿಯನ್ನು ಹೊರಿಸಿ ನಮ್ಮ ಗುರಿ ಬಡವರಿಗೆ ಸೈಟ್ ಕೊಡುವುದೇನಿದೆ ಆ ಪೂರ್ತಿ ಸೈಟ್ ಕೊಡುವುದಕ್ಕೆ ಆಗುವುದೇ ಇಲ್ಲ, ಸಾಧ್ಯವೇ ಆಗುವುದಿಲ್ಲ. ನಾನು ಹೇಳುತ್ತೇನೆ, ಶಾಸಕರ ಕೈಗೆ ಅಧಿಕಾರ ಕೊಟ್ಟಿದ್ದರಿಂದ, ಜನತಾದಳ ಶಾಸಕ ಮಿತ್ರರು ಆ ಕಡೆ ಕುಳಿತುಕೊಂಡಿದ್ದೀರಿ. ನಿಮ್ಮ ಕೈಗೇ ಅಧಿಕಾರ ಕೊಡಬೇಕು ಎನ್ನತಕ್ಕವಾದದವನು ನಾನು. ನೀವು ಜಾಸ್ತಿ ಜನ ಇದ್ದೀರಿ, ತೆಗೆದುಕೊಂಡು ಹೋಗಿ. ಹೋಗಿ ಕುಳಿತುಕೊಳ್ಳಿ. ಇಲ್ಲದಿದ್ದರೆ ಒಂದು ಒಂದೂವರೆ ವರ್ಷದಲ್ಲಿ 7 ಲಕ್ಷ 60 ಸಾವಿರ ಸೈಟುಗಳನ್ನು ಕೊಡುವುದಕ್ಕೆ ಯಾರಿಗೂ ಸಾಧ್ಯವಾಗುತ್ತಿರಲಿಲ್ಲ, ನನ್ನ ಕಾಲದಲ್ಲಿ ಇವತ್ತು ಒಂದು ಆಲ್ ಇಂಡಿಯಾ ರೆಕಾರ್ಡ್ ಎನ್ನುವ ಮಾತನ್ನು ಆಡಿದ್ದರೆ ನನಗೆ ಹೆಮ್ಮೆಯ ವಿಚಾರ. ಸಂತೋಷಪಡುತ್ತೇನೆ ನಾನು. ಕೆಲವು ಮಿತ್ರರು ಹೇಳುತ್ತಿದ್ದರು. ಸೈಟು ಕೊಡಲಿಲ್ಲ, ಬರೀ ಚೀಟಿ ಕೊಟ್ಟರು ಕೈಗೆ ಎಂದು. ಎಲ್ಲಾದರೂ ಒಪ್ಪುತಪ್ಪುಗಳು ಒಂದೊಂದಿರಬಹುದು. ಬರೀ ಹಕ್ಕುಪತ್ರ ಕೊಟ್ಟು ಸೈಟ್ ಕೊಡದೇ ಇದ್ದರೆ ಜನ ಏನು ಬಾಳೇಹಣ್ಣು ತಿನ್ನುತ್ತಾ ಕುಳಿತುಕೊಳ್ಳುತ್ತಾರೋ? ಜನ ಸುಮ್ಮನೆ ಇರುತ್ತಾರೋ ಅಧ್ಯಕ್ಷರೇ? ಅದಕ್ಕಾಗಿ ನಾನು ಕೇಳುವುದು, ಇವತ್ತು ಅಧಿಕಾರಿಗಳ ಮುಖಾಂತರವೇ ಕೆಲಸಕಾರ್ಯಗಳನ್ನು ಮಾಡಿಸುತ್ತೇವೆ, ಆದರೆ ಓವರಾಲ್ ಸೂಪರ್‌ವಿಷನ್ ಶಾಸಕರ ಕೈಗೆ ಇಡುತ್ತೇವೆ ನಾವು. ಹಾಗಿಡುವುದು ಪ್ರಜಾಪ್ರಭುತ್ವದ ಲಕ್ಷಣ. ಅದು ನೀತಿ ಪ್ರಶ್ನೆ ಆದ್ದರಿಂದ ಈಗಲೂ ಕೂಡ ತಮ್ಮ ಮುಖಾಂತರ ಮಾನ್ಯ ಸಭಾನಾಯಕರನ್ನು, ಮುಖ್ಯಮಂತ್ರಿಗಳನ್ನು ನಾನು ವಿನಂತಿ ಮಾಡುತ್ತೇನೆ, ನಾವು ನಿನ್ನೆ ಮೊನ್ನೆ ತಮ್ಮ ಕೊಠಡಿಯಲ್ಲಿ ಮಾತನಾಡಿದ್ದೇವೆ, ಆದರೆ ವಿವರಗಳಿಗೆ ನಾನು ಹೋಗುವುದಿಲ್ಲ ಮಾನ್ಯ ಮಿತ್ರರು ಈಗಾಗಲೇ ಹೇಳಿಬಿಟ್ಟಿದ್ದಾರೆ. ನಾನು ಕಾಲವನ್ನು ಹೆಚ್ಚು ತೆಗೆದುಕೊಳ್ಳಲಾರೆ. ಈಗಲಾದರೂ ಕೂಡ ಮಾನ್ಯ ಸಭಾನಾಯಕರು ವಿಚಾರ ಮಾಡಿ ಕೆಲವು ಸಮಿತಿಗಳಿಗೆ ಒಪ್ಪಿರತಕ್ಕ ಲಕ್ಷಣ ಕಂಡುಬಂದಿದೆ ಮಾತುಕತೆಯಲ್ಲಿ. ನಾನು ಅಭಿನಂದಿಸುತ್ತೇನೆ. ಉದಾಹರಣೆಗೆ ಆರಾಧನ ಸಮಿತಿ. ನಾನು ಅಧಿಕಾರ ಬಿಟ್ಟಮೇಲೆ ಆರಾಧನಾ

ಕಾರ್ಯಕ್ರಮಗಳಿಗೆ ಹಣವನ್ನೇ ಕೊಡಲಿಲ್ಲ. ಮೂರು ನಾಮ ಬಿತ್ತು ಅದಕ್ಕೆ ಕಾನೂನು ಪ್ರಕಾರ ಆರಾಧನಾ ಸಮಿತಿ ಏನೂ ಉಪಯೋಗ ಆಗಲಿಲ್ಲ. ಒಂದು ಕಾರ್ಯಕ್ರಮ ಹಾಕಿ. ನಾನು ಹೇಳುತ್ತೇನೆ ಆರಾಧನಾ ಸಮಿತಿಗೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿದರೂ ಎಷ್ಟು ದೇವಸ್ಥಾನ ಕಟ್ಟಿಸಿಕೊಡುವುದಕ್ಕಾಗುತ್ತದೆ ನೀವು? ಅಷ್ಟು ಸುಲಭ ಅಲ್ಲ ಅದು. ಅದಕ್ಕಾಗಿ ನಾನು ಏನು ಹೇಳುತ್ತೇನೆ ಅಂದರೆ, ಅಕ್ರಮವಾದುದನ್ನು ಸಕ್ರಮಗೊಳಿಸುವುದು ಬಹಳ ಪ್ರಾಮುಖ್ಯವಾದುದು. ಯಾರ ಹೊಟ್ಟೆಗೆ ಅನ್ನ ಇಲ್ಲ, ನನಗೊಂದು ಸೈಟಿಲ್ಲ, ನನಗೊಂದು ಭೂಮಿ ಇಲ್ಲ ಎನ್ನತಕ್ಕ ಒಂದು ಆಶೋತ್ತರ ಇಟ್ಟುಕೊಂಡು ಪರಿತಪಿಸುತ್ತಿದ್ದಾನೆ ಒಂದು ಬಡಜೀವ ಸಮಾಜದಲ್ಲಿ ಅವನಿಗೆ ಒಂದು ಊರುಗೋಲಾಗತಕ್ಕ ಕಾರ್ಯಕ್ರಮವೇ ಈ ಆಶ್ರಯ, ಅಕ್ರಮ ಸಕ್ರಮ ಇವೆಲ್ಲಾ. ಅದಕ್ಕಾಗಿ ಸಭಾಧ್ಯಕ್ಷರೆ, ನಾನು ಕೇಳುವುದು ಈ ಸಂದರ್ಭದಲ್ಲಿ ನಮ್ಮ ನೀತಿಗೆ ಅನುಗುಣವಾಗಿ ಇಟ್ಟುಕೊಳ್ಳಬೇಕು. ಅಲ್ಲೇನಾದರೂ ಓರೆಕೋರೆಗಳಿದ್ದರೆ ತಿದ್ದಿಕೊಂಡು ಮುಂದಕ್ಕೆ ಹೋಗಬೇಕು. ಒಪ್ಪತಪ್ಪುಗಳಿದ್ದರೆ ಸರಿಪಡಿಸಿಕೊಂಡು ಹೋಗತಕ್ಕಂಥ ಒಂದು ವಿಚಾರಧಾರೆ ನಮ್ಮದು ಮೂಲಭೂತವಾಗಿ ಇರಬೇಕು. ಅದಕ್ಕಾಗಿ ನಾನು ಸ್ಪಷ್ಟವಾಗಿ ನನ್ನ ಕಾಲದಲ್ಲೇ ನಾನು ಮಾಡಿದೆ, ಕ್ಷಮಿಸಬೇಕು, ನಾನು ಮಾತನಾಡತಕ್ಕ ಕಾಲದಲ್ಲೂ ಕೂಡ ನನ್ನ ಅಭಿಪ್ರಾಯವನ್ನು ನಾನು ಹೇಳಿದ್ದೇನೆ. ಮತ್ತೊಂದು ಅಭಿಪ್ರಾಯವನ್ನು ವಿಭಿನ್ನವಾಗಿ ನಾನು ಇಟ್ಟುಕೊಳ್ಳಲಾರೆ. ಇನ್ನೊಂದು ಮಾತನ್ನು ನಾನು ಹೇಳುತ್ತೇನೆ, ಇದು ಕೆಲವರಿಗೆ ಸಾಧ್ಯವಾಗಲಾರದು ಎಂಬ ಅಭಿಪ್ರಾಯ ಬರಬಹುದು. ಪ್ರಜಾಪ್ರಭುತ್ವ ಇದು. ಮತ್ತೆ ನಾವು ಅಧಿಕಾರಕ್ಕೆ ಬಂದರೆ ನಾನು ಸ್ಪಷ್ಟ ಪಡಿಸುತ್ತೇನೆ, ಮತ್ತೆ ಶಾಸಕರಿಗೇ ಅಧಿಕಾರ ಕೊಟ್ಟು ಕೂಡಿಸಬೇಕು ಎನ್ನುವುದು ನನ್ನ ಆಸೆ.ಆ ಸಮಿತಿಗಳಿಗೆ ಮತ್ತೆ ಶಾಸಕರನ್ನೇ ಅಧ್ಯಕ್ಷರನ್ನಾಗಿ ಮಾಡಿ ಕೂರಿಸಬೇಕು. ಹಾಗೆ ಕೂರಿಸಿದಾಗ ಮಾತ್ರ ಜನರಿಗೆ ನೀವು ಸ್ಪಂದಿಸುವುದಕ್ಕೆ ಸಾಧ್ಯವಾಗುತ್ತವೆ. ಇಲ್ಲದಿದ್ದರೆ ಜನರಿಂದ ಬಹು ದೂರ ಹೋಗುತ್ತೀರಿ ಎಂಬ ಅಭಿಪ್ರಾಯ ನಾನು ಇಟ್ಟುಕೊಂಡಿದ್ದೇನೆ. ಇದನ್ನು ಪಕ್ಷಾತೀತವಾಗಿ ಸದನದ ಎಲ್ಲಾ ಮೂಲೆಗಳಿಗೂ ತಮ್ಮ ಮುಖಾಂತರ ನಾನು ವಿನಂತಿ ಮಾಡಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳಿಗೆ, ಸರ್ಕಾರಕ್ಕೆ ಈ ಸಂದರ್ಭದಲ್ಲಿ ಅನಿವಾರ್ಯವಾಗಿ, ನಮ್ಮ ನೀತಿಗೆ ಅನುಗುಣವಾಗಿ ಸರ್ಕಾರ ಇವತ್ತು ಆರಾಧನಾ, 20 ಅಂಶದ ಆರ್ಥಿಕ ಕಾರ್ಯಕ್ರಮ, ಇವೆರಡೇ ಎಂದು ಕಾಣುತ್ತವೆ. ನೀವು ಕಾರ್ಯಾಲಯ ಮಾಡಿಕೊಡುವುದು ತಾಲ್ಲೂಕ್ ಆಫೀಸೋ ಮತ್ತೊಂದೋ ನಾನು ಅದನ್ನು ಅಭಿನಂದಿಸುತ್ತೇನೆ.

ಶ್ರೀ ಬಿ.ಎಸ್.ಶಿವನಂಜಪ್ಪ : ಆರಾಧನಾ ಕಮಿಟಿಗೆ ತಹಸೀಲ್ದಾರರೇ ಅಧ್ಯಕ್ಷರು. ತಹಸೀಲ್ದಾರರೇ ಇದ್ದಾರೆ. ಆಶ್ರಯದಲ್ಲಿ ಮತ್ತು ಬಗರ್‌ಹುಕುಂ ಕಮಿಟಿಗಳಲ್ಲಿ ಶಾಸಕರು ಅಧ್ಯಕ್ಷರಾಗಿರುತ್ತಾರೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೆ, ಈ ದೃಷ್ಟಿ ಇರುವುದರಿಂದ ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ ಈಗಲೂ ಕೂಡ ತಾವು ಒಪ್ಪಿಗೆ ಕೊಡಿ. ಅಕ್ರಮ ಸಕ್ರಮಗೊಳಿಸುವುದು ಮತ್ತು ಆಶ್ರಯ ಸಮಿತಿ – ಇವರಡಕ್ಕೆ ಒಪ್ಪಿಗೆ ಕೊಟ್ಟರೆ ತಪ್ಪೇನೂ ಆಗುವುದಿಲ್ಲ. ಇನ್ನೂ ಬೇಕಾದರೆ ಕಾನೂನು ಬದಲಾವಣೆ ಮಾಡಿ. ಅವರ

ಮೇಲೆ ನೀವು ಬೇಕಾದಷ್ಟು ಹಿಡಿತ ಇಟ್ಟುಕೊಳ್ಳಿ ಅದನ್ನು ಮಾಡಿ ಹೇಗೆ ಮಾಡಬೇಕು ಎನ್ನುವುದನ್ನು. ಈಗಲೂ ಕೂಡ ಪ್ರಕಟ ಮಾಡಿದರೆ ಬಹಳ ಒಳ್ಳೆಯದು ಎಂಬ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ಹೇಳುತ್ತಾ ಇನ್ನು ತಾವು ಒಪ್ಪದೇ ಇದ್ದರೆ ಇದು ಅನಿವಾರ್ಯವಾಗಿ ಪ್ರತಿಭಟನೆ, ಇದು ವೈಯಕ್ತಿಕ ಪ್ರಶ್ನೆಯಲ್ಲ, ನೀತಿಯ ಆಧಾರದ ಮೇಲೆ ನಾವು ಕೂಡ ಸಭಾತ್ಯಾಗವನ್ನು ನಮ್ಮ ಕರ್ನಾಟಕ ಕಾಂಗ್ರೆಸ್ ಪಕ್ಷದ ಪರವಾಗಿ ನಾವು ಮಾಡತಕ್ಕದ್ದು ಅನಿವಾರ್ಯವಾಗುತ್ತದೆ ಎಂಬ ಅಂಶವನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಎರಡು ಮಾತುಗಳನ್ನು ಆಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇನೆ.

ಅಧ್ಯಕ್ಷರು : ಎಲ್ಲಾ ಸನ್ಮಾನ್ಯ ಸದಸ್ಯರುಗಳ ಪ್ರೀತಿ ವಿಶ್ವಾಸಗಳಿಂದ ನಾನು ಈ ಹೊಣೆಗಾರಿಕೆಯನ್ನು ಹೊತ್ತಮೇಲೆ ನಾವು ನಡೆಸಿದ ಅತ್ಯಂತ ದೀರ್ಘ ಅಧಿವೇಶನ ಇದು. ಬಹಳ ಉಪಯುಕ್ತವಾಗಿ ಸದನದ ಸಮಯ ಒಂದು ಕ್ಷಣ ಕೂಡ ವ್ಯರ್ಥ ಆಗದ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ತಾವೆಲ್ಲರೂ ಕೂಡ ಬಹಳ ಹೆಚ್ಚಿನ ರೀತಿಯಲ್ಲಿ ಸಹಕರಿಸಿದ್ದೀರಿ. ನಾನು ತಮ್ಮೆಲ್ಲರನ್ನೂ ಅಭಿನಂದಿಸಬೇಕು. ವಿಶೇಷವಾಗಿ ವಿರೋಧಪಕ್ಷದಲ್ಲಿರತಕ್ಕ ಧುರೀಣರು ಮತ್ತು ಎಲ್ಲಾ ಸದಸ್ಯರನ್ನು ನಾನು ಅಭಿನಂದಿಸಲೇಬೇಕು. ನಾನು ಬಹಳ ಸಂತೋಷದಲ್ಲಿ ಎಲ್ಲಾ ಯಶಸ್ವಿಯಾಗಿ ಆಯಿತು ಎಂದು ಹೇಳಿ ಅಂದುಕೊಳ್ಳುವಾಗ ಮತ್ತೆ ಏನೋ ಒಂದು ಚಿಕ್ಕ ಕಗ್ಗಂಟು ಬಂತು. ಸನ್ಮಾನ್ಯ ಬಂಗಾರಪ್ಪನವರು ಮತ್ತು ಇತರರು ಹೇಳಿದಂತೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ತಾವೆಲ್ಲರೂ ಕೂಡ ತಮ್ಮದೇ ಆದಂಥ ಸಿದ್ಧಾಂಥ ಮತ್ತು ನೀತಿಯನ್ನು ಪ್ರತಿಪಾದನೆ ಮಾಡಿ ಈ ಸದನದ ಒಳಗೆ ಪ್ರವೇಶ ಮಾಡಿದ್ದೀರಿ. ಬಲಾಬಲಗಳನ್ನು ಆಧರಿಸಿ ಹೆಚ್ಚು ಸಂಖ್ಯೆ ಹೊಂದಿರತಕ್ಕವರು ಇಲ್ಲಿಗೆ ಬರುತ್ತಾರೆ. ಉಳಿದವರು ತಾವು ಈ ಕಡೆ ಬರುತ್ತೀರಿ. ಕಾರ್ಯತಂತ್ರ ನೀತಿ ಮತ್ತು ವಿಧಾನ ಒಬ್ಬೊಬ್ಬರದು ಒಂದೊಂದು ರೀತಿಯಾಗಿರುತ್ತದೆ. ನಿಮ್ಮ ಕಾರ್ಯತಂತ್ರವನ್ನು ಬಲಯುತವಾಗಿ ಪ್ರತಿಪಾದನೆ ಮಾಡತಕ್ಕ ಹಕ್ಕು ತಮ್ಮದಾಗಿರುತ್ತದೆ. ತಮ್ಮದೇ ಆದ ನೀತಿಗೆ, ತಮ್ಮದೇ ಆದ ಕಾರ್ಯವಿಧಾನಕ್ಕೆ ಅಂಟಿಕೊಳ್ಳತಕ್ಕ ಹಕ್ಕು ಅವರಾಗಿರುತ್ತದೆ. ಈ ಮಧ್ಯೆ ಕೆಲವು ವಿಚಾರಗಳಲ್ಲಿ ಜನಹಿತದೃಷ್ಟಿಯಿಂದ ಒಂದು ಒಡಂಬಡಿಕೆಗೆ ಪ್ರಯತ್ನ ಮಾಡತಕ್ಕದ್ದು ಸದನವನ್ನು ಸುಗಮವಾಗಿ ನಡೆಸಿಕೊಂಡು ಹೋಗುವುದಕ್ಕೆ ಮಾಡತಕ್ಕಂಥ ಒಂದು ಜವಾಬ್ದಾರಿ ನಮ್ಮದಾಗಿತ್ತು. ತಾವು ನನ್ನ ಬಗ್ಗೆ ಒಳ್ಳೆಯ ಮಾತುಗಳನ್ನು ಹೇಳಿದ್ದೀರಿ, ಮತ್ತೆ ತಮ್ಮ ತೀರ್ಮಾನವನ್ನೂ ಕೂಡ ವ್ಯಕ್ತ ಮಾಡಿದ್ದೀರಿ. ಈಗ ಮುಂದಿನ ಕಲಾಪಗಳನ್ನು ನಾವು ನಡೆಸಿಕೊಂಡು ಹೋಗಬೇಕಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಒಂದು ಏನೆಂದರೆ, ದುಃಖ ಏನನ್ನಿಸುತ್ತಿದೆ ಎಂದರೆ ಎಲೆಕ್ಟೆಡ್ ರೆಪ್ರಸೆಂಟೆಟೀವ್ಸ್ ಮೇಲೆ ನಿಮಗೆ (ಸರ್ಕಾರಕ್ಕೆ) ವಿಶ್ವಾಸವಿಲ್ಲ. ಹಿಂದಿನ ಸರ್ಕಾರದ ಕೆಲವು ಆಜ್ಞೆಗಳನ್ನು ತೆಗೆದುಕೊಂಡರೆ, ನೀವು ಏನು ಹೇಳಿದಿರಿ ಅಂದರೆ, ಎಲೆಕ್ಟೆಡ್ ರೆಪ್ರಸೆಂಟೆಟೀವ್ಸ್‌ಗೆ ನಾವು ಅಧಿಕಾರವನ್ನು ಕೊಡುತ್ತೇವೆ, ನೀವು ಅಧಿಕಾರಿಗಳಿಗೆ ಕೊಟ್ಟಿದ್ದೀರಿ ಎಂದು ಹೇಳಿ ಹೀಯಾಳಿಸಿದಿರಿ. ಇವತ್ತಿನ ದಿವಸ ಎಲೆಕ್ಟೆಡ್ ರೆಪ್ರಸೆಂಟೆಟೀವ್ಸ್‌ಗೆ ಇರತಕ್ಕ ಹಕ್ಕನ್ನು ಕಸಿದುಕೊಂಡು ನಾವು ಅಧಿಕಾರಿಗಳಿಗೆ ಕೊಡುತ್ತೇವೆ ಎಂದು ಹೇಳಿ ನೀವದನ್ನೇ ಸಮರ್ಥನೆ ಮಾಡಿಕೊಳ್ಳುತ್ತೀರಿ ಅಂದರೆ ಅದು ಎಷ್ಟರಮಟ್ಟಿಗೆ ಇದೆ ಎಂಬುದನ್ನು ತಾವೇ ನೋಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ಒಂದು ದಿನ ಬಹುಶಃ ಮುಖ್ಯಮಂತ್ರಿಗಳೇ ಪಶ್ಚಾತ್ತಾಪ ಪಡಬೇಕಾಗುತ್ತದೆ. ಎಲ್ಲಾ 224 ಜನ ಶಾಸಕರು, ಇವತ್ತು ಇಲ್ಲಿರುವಂಥವರು ಆ ಕಡೆ ಇರಬಹುದು ಬದಲಾವಣೆಯಾಗಬಹುದು. ಆದರೆ ಮುಂದೆ ಏನು ಮೇಲ್ಪಂಕ್ತಿ ಹಾಕುತ್ತೇವೆ ಎನ್ನುವುದು ಬಹಳ ಮುಖ್ಯವಾದುದು. ಆದ್ದರಿಂದ ಚುನಾಯಿತ ಪ್ರತಿನಿಧಿಗಳಿಗೆ ಒಂದು ಅಪಮಾನ ಮಾಡಿದರೆ ಅದು ನಮಗೆ ಆದ ಅಪಮಾನ ಅಲ್ಲ. ನಮ್ಮನ್ನು ಆಯ್ಕೆ ಮಾಡಿದ ಕಳುಹಿಸಿದ ಜನರಿಗೆ ಮಾಡಿದ ಅಪಮಾನ ಆಗಬಹುದು, ಇದು ಸರ್ವಾಧಿಕಾರಿ ನೀತಿ ಆಗಬಹುದು. ಎಂದು ಜನ ಭಾವಿಸಬಹುದು. ಆ ಕಳಂಕಕ್ಕೆ ತಾವು ಗುರಿಯಾಗಬಾರದು ಎಂಬ ಭಾವನೆ ಇಟ್ಟು ಹೇಳಿದ್ದೇವೆ. ಆದರೆ ತಾವು ಏನೋ ಒಂದು ಗಟ್ಟಿ ಮನಸ್ಸು ಮಾಡಿದ್ದೀರಿ. ತಾವು ಏನು ಬೇಕಾದರೂ ಮಾಡಬಹುದು. ನಾವು ಪ್ರತಿಭಟನೆ ಮಾಡಿ ಹೊರಗಡೆ ಹೋಗುತ್ತಿದ್ದೇವೆ. ಮತ್ತೆ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆಯ ಬರುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಮ್ಮ ಮಾತಿಗೂ ಮನ್ನಣೆ ಇಲ್ಲ ಅಂದರೆ,. ಇದು ಅನಿವಾರ್ಯ. ಅದಕ್ಕೆ ನಾವೆಲ್ಲರೂ ಕೂಡ ನಮ್ಮ ಪಕ್ಷದ ವತಿಯಿಂದ ಕೂಡ ಸಭಾತ್ಯಾಗವನ್ನು ಮಾಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಬಗ್ಗೆ ಬಹಳ ಅಪಾರವಾದ ಗೌರವ ಇದೆ. ಅದರ ಬಗ್ಗೆ ಬೇರೆ ಮಾತೇ ಇಲ್ಲ.

ಅಧ್ಯಕ್ಷರು : ಶ್ರೀ ಜಯಚಂದ್ರರವರದ್ದು ಒಂದು ಪ್ರಶ್ನೆ ಇದೆ. ಅವರೊಬ್ಬರನ್ನು ಬಿಟ್ಟು ಉಳಿದವರು.

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷ, ಕಾಂಗ್ರೆಸ್(ಐ), ಕರ್ನಾಟಕ ಕಾಂಗ್ರೆಸ್ ಪಕ್ಷ, ಹಾಗೂ ಕನ್ನಡ ಚಳುವಳಿ ವಾಟಾಳ್ ಪಕ್ಷದ ಸದಸ್ಯರೆಲ್ಲರೂ ಸಭೆಯಿಂದ ಹೊರಗೆ ನಡೆದರು.)

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ವಿಷಯ : ತುಮಕೂರು ಜಿಲ್ಲಾ ಸಾಕ್ಷರತಾ ಆಂಧೋಲನ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 96(390)

ಶ್ರೀ ಟಿ.ಬಿ.ಜಯಚಂದ್ರ(ಕಳ್ಳಂಬೆಳ್ಳ) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1. ತುಮಕೂರು ಜಿಲ್ಲೆ ಸಾಕ್ಷರತಾ ಆಂದೋಲನದಲ್ಲಿ ನಡೆದಿರುವ ಅವ್ಯವಹಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಸಾಕ್ಷರತೆಗೆ ಸಂಬಂಧಿಸಿದಂತೆ ಒಟ್ಟು ಮುದ್ರಿತವಾದ ಹೊತ್ತಿಗೆಗಳು : ಪುಸ್ತಕಗಳು ಎಷ್ಟು?

ಅವುಗಳನ್ನು ಯಾರು ಯಾರಿಗೆ ಹಂಚಲಾಗಿದೆ? ಹಂಚಿದವರು ಯಾರು? ಪಡೆದುಕೊಂಡವರು ಯಾರು? ಹಾಗೂ ಪಡೆದುಕೊಂಡ ಒಟ್ಟು ಪುಸ್ತಕಗಳು : ಹೊತ್ತಿಗೆಗಳ ಸಂಖ್ಯೆ ಎಷ್ಟು? ಯಾವ ಯಾವ ದಿನಾಂಕಗಳಲ್ಲಿ ಹಂಚಲಾಗಿದೆ? (ಈ ಬಗ್ಗೆ ಪೂರ್ಣ ವಿವರ ನೀಡುವುದು)